ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 11 ಮಾರ್ಚ್ 15, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

461 ಮಂದಿ ಹಂಚು ಕಾರ್ಮಿಕರ ಬಂಧನ - ಲಾಠಿ ಚಾರ್ಜ್

ದ.ಕ. ಮತ್ತು ಉ.ಕ. ಜಿಲ್ಲೆಯಲ್ಲಿ ಸೌತ್‌ಕೆನರಾ ಟೈಲ್ ವರ್ಕರ್ಸ್ ಯೂನಿಯನ್ ಆಶ್ರಯದಲ್ಲಿ 5000 ಕ್ಕೂ ಮಿಕ್ಕಿ ಹಂಚು ಕಾರ್ಮಿಕರು ಹೋರಾಟದ ಕಣದಲ್ಲಿದ್ದಾರೆ. ದ.ಕ.ದ ಕುಂದಾಪುರ, ಉಡುಪಿ ಮತ್ತು ಮಂಗಳೂರಿನಲ್ಲಿ ಪ್ರತ್ಯೇಕ ಪ್ರತ್ಯೇಕವಾದ ಒಪ್ಪಂದವು ಕಳೆದ 1984 ರಲ್ಲಿ ನಡೆಯಿತು. ಈ ಒಪ್ಪಂದವಾಗುವಾಗ ಕಾರ್ಮಿಕರ ಮುಖ್ಯ ಕೇಳಿಕೆ-ಏಲಿತ ತುಟ್ಟಿ ಭತ್ತೆ ಆಗಿನ ಕಾರ್ಮಿಕ ಸಚಿವರು 53 ದಿವಸದ ಕಾರ್ಮಿಕರ ಹೋರಾಟವನ್ನು ಗಮನಿಸಿ ಕಾರ್ಮಿಕ ಮತ್ತು ಮಾಲಕರ ಪ್ರತಿನಿಧಿಗಳನ್ನು ಬೆಂಗಳೂರಿಗೆ ಕರೆಯಿಸಿ ಅವರ ಕೂಡಡಿಯಲ್ಲಿ ನಾನು ಏರಿಳಿತ ತುಟ್ಟಿಭತ್ತೆ ಸಹಿತ ಕನಿಷ್ಟ ಕೂಲಿ ಮಾಡಿಸುತ್ತೇನೆ. ಇದರಲ್ಲಿ ಏರಿಳಿತ ತುಟ್ಟಿಭತ್ತೆ ಸಿಗುತ್ತದೆ. ಆದುದರಿಂದ ಈಗ ನೀವು ಮೂಲ ಕೂಲಿ ಹೆಚ್ಚಳ ಮತ್ತಿನ್ನಿತರ ಸೌಲತ್ತುಗಳ ಬಗ್ಗೆ ಒಪ್ಪಂದ ಮಾಡಿಕೊಳ್ಳಿ ಎಂಬ ಆಶ್ವಾಸನೆಯನ್ನು ಕೊಟ್ಟರು ಇದಕ್ಕೆ ಅನುಸಾರವಾಗಿ ಮಂಗಳೂರು ಕುಂದಾಪುರ ಮತ್ತು ಉಡುಪಿಯಲ್ಲಿ ಒಪ್ಪಂದವಾಯ್ತು. ಮೂರು ವರ್ಷ ಕಳೆದರೂ

ಕೆ. ಮೂಸಬ್ಬ

ಸರ್ಕಾರದ ಆಶ್ವಾಸನೆ ಈಡೇರಲಿಲ್ಲ. ಸಚಿವರಿಗೆ ಮತ್ತೆ ಮತ್ತೆ ಮನವಿ ಕೊಟ್ಟಾಯ್ತು ಏನಾದರೂ ಇನ್ನೂ ಜಾರಿಯಾಗಲಿಲ್ಲ.

ಕುಂದಾಪುರದಲ್ಲಿ ಮತ್ತು ಉಡುಪಿಯಲ್ಲಿ ಒಪ್ಪಂದವು 1986 ಡಿಸೆಂಬರ್ ಅಖೇರಿಗಾಗಿದ್ದ ಯೂನಿಯನ್ ಮೂಲ ಕೂಲಿ ಹೆಚ್ಚಳ ರೂ. 7, ಹಾಗೂ ಏರಿಳಿತ ತುಟ್ಟಿಭತ್ತೆ ಸಿಗಬೇಕು, ಈಗ ಸಿಗುವ ಬೋನಸ್ಸು 20% ಹೆಚ್ಚಬೇಕೆಂದು ಕೇಳಿಕೆಗಳನ್ನು ಮಾಲಿಕರ ಮುಂದಿಟ್ಟು ಎರಡು ಮೂರು ಸುತ್ತಿನ ಮಾತುಕತೆಯಲ್ಲಿ ಕೂಡ ಏರಿಳಿತ ತುಟ್ಟಿಭತ್ತೆ ಕೊಡಲು ನಿರಾಕರಿಸುವುದು ಮಾತ್ರವಲ್ಲ ಮೂಲಕೂಲಿಯಲ್ಲಿ ಸ್ವಲ್ಪ ಹೆಚ್ಚಿಸುವ ಅಭಿಪ್ರಾಯ ಮಾಲಕರು ವ್ಯಕ್ತಪಡಿಸಿದರು. ಏರಿಳಿತ ತುಟ್ಟಿಭತ್ತೆ ಇಂದಿನ ಪರಿಸ್ಥಿತಿಯಲ್ಲಿ ಸಿಗದಿದ್ದರೆ ಏರುತ್ತಿರುವ ಬೆಲೆಯಿಂದಾಗಿ ಬದುಕಲು ಸಾಧ್ಯವಿಲ್ಲವೆಂದು ಮಾಲಕರಿಗೆ ತಿಳಿಸಿದರೂ ಮಾಲಕರು ತಮ್ಮ ಹಠಮಾರಿತನ ಬಿಡಲಿಲ್ಲ. ಬೇರೆ ದಾರಿಇಲ್ಲದೆ ತಾ. 28.1.87 ರಿಂದ 12 ಕಾರ್ಖಾನೆಗಳ 2000 ಕ್ಕೂ ಮಿಕ್ಕಿ ಕಾರ್ಮಿಕರು ಮುಷ್ಕರ ನಿರತರಾದರು. ಆದರೆ ಸರ್ಕಾರ ಈತನಕ ಕಣ್ಣು ತೆರೆಯಲಿಲ್ಲ.

ಮಂಗಳೂರಿನಲ್ಲಿ ಒಪ್ಪಂದ ಮುಗಿದು ತಿಂಗಳು ಒಂದಾದರೂ ಮಾಲಕರು ಏನೂ ಕೊಡಲು ಸಾಧ್ಯವಿಲ್ಲ ಎಂಬ ಹಠಮಾರಿತನ ತೋರಿಸಿದರು. ಇಡೀ ರಾಜ್ಯದಲ್ಲಿ ಮಂಗಳೂರಿನ ಜೀವನ

(8 ನೇ ಪುಟ ನೋಡಿ)

ಅಬಕಾರಿ ಆದಾಯದಲ್ಲಿ ನೂರು ಕೋಟಿ ನಷ್ಟ

ವಿಧಾನಸಭೆಯಲ್ಲಿ ಶಾಸಕರ ಧರಣಿ

ಕಳಪೆ ಮದ್ಯ ಮಾರಾಟದಿಂದ ರಾಜ್ಯದ ಬೊಕ್ಕಸಕ್ಕೆ ಒಂದು ನೂರು ಕೋಟಿ ರೂಪಾಯಿ ಹಾನಿಯಾಗುತ್ತಿದೆಂದೂ, ಮದ್ಯ ತಯಾರಕರ ಮತ್ತು ಅಧಿಕಾರಿಗಳ ಕೈವಾಡದಿಂದಾಗಿ 1986–87ರಲ್ಲಿ ಮದ್ಯ ಮಾರಾಟದ ಆದಾಯದಲ್ಲಿ ರೂ. 66 ಕೋಟಿ ಕಡಿಮೆಯಾಗಿದೆಂದು ಸಿ. ಪಿ. ಐ. [ಎಂ] ಪಕ್ಷದ ಶಾಸಕರಾದ ಆರ್. ವೆಂಕಟರಾಮಯ್ಯನವರು ವಿಧಾನಸಭೆಯಲ್ಲಿ ಆರೋಪ ಹೊರಿಸಿ, ಇದರ ಕುರಿತು ನ್ಯಾಯಾಂಗ ವಿಚಾರಣೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಯೋಗ್ಯಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಸಭಾಂಗಣದಲ್ಲಿ ಧರಣಿ ಕೂತರು. ಸಭಾಧ್ಯಕ್ಷ ಬಣಕಾರ ಮತ್ತು ಮುಖ್ಯಮಂತ್ರಿ ಹೆಗಡೆಯವರು ಆರೋಪಗಳನ್ನು ಲೋಕಾಯುಕ್ತಕ್ಕೆ ವಿಚಾರಣೆಗಾಗಿ ಕಳುಹಿಸಲಾಗುವುದೆಂಬ ಆಶ್ವಾಸನೆಯಿತ್ತ ನಂತರ ತಮ್ಮ ಧರಣಿಯನ್ನು ಬಿಟ್ಟುಕೊಟ್ಟರು. ಎಚ್. ದಾಸಪ್ಪ ಅಂಡ್ ಸನ್ಸ್ ಕಂಪೆನಿಗೆ ಮದ್ಯ ಮಾರಾಟದ ಕಂಟ್ರಾಕ್ಟ್ ಕೊಡಬಾರದೆಂದು ಕರ್ನಾಟಕ ಹೈಕೋರ್ಟ್ ತೀರ್ಪು ನೀಡಿದರೂ ಕೂಡ, ಸರ್ಕಾರ ಪುನಃ ಅದನಿಗೆ ಕಂಟ್ರಾಕ್ಟ್ ಕೊಟ್ಟಿದ್ದರೂ, ಆ ಕಂಪೆನಿಯಿಂದ ಸರ್ಕಾರಕ್ಕೆ ಸಲ್ಲಬೇಕಾದ ಕೋಟ್ಯಾವಧಿ ರೂಪಾಯಿ ಸಂದಾಯವಾಗದೆ ಬಾಕಿ ಉಳಿದಿದೆಂದೂ, ಮದ್ಯ ಮಾರಾಟದ ಅವ್ಯವಹಾರದ ಕುರಿತು ನ್ಯಾಯಾಂಗ ತನಿಖೆ ನಡೆಸುತ್ತೇವೆಂಬ ತಾವಿತ್ತ ಆಶ್ವಾಸನೆಯನ್ನು ಹೆಗಡೆಯವರು ಪೂರೈಸಲೆಂದೂ ಟೀಕಿಸಿದರು.

1983-84 ರಲ್ಲಿ ಅಬಕಾರಿ ಖಾತೆಯ ಕಂದಾಯದಲ್ಲಿ ಹೆಚ್ಚಳವಾಗಿದ್ದರೂ 1986-87 ರಲ್ಲಿ ರೂ. 66 ಕೋಟಿ ಕಡಿಮೆಯಾಗಿದೆ. 1983-84ರಲ್ಲಿ ರೂ. 163 ಕೋಟಿ, 1984-85ರಲ್ಲಿ ರೂ. 190 ಕೋಟಿ, 1985-86ರಲ್ಲಿ ರೂ. 296 ಕೋಟಿ ಆದಾಯ. ಆದರೆ 1986-87ರಲ್ಲಿ ಅದು ರೂ. 230 ಕೋಟಿಗಿಳಿದಿದೆ. "ಇದಕ್ಕೆ ಕಾರಣವೇನು ? ಇದಕ್ಕೆ ಜವಾಬ್ದಾರರಾರು ? ನೀವೇನು ಕ್ರಮ ತೆಗೆದುಕೊಳ್ಳುತ್ತೀರಿ ?" ಎಂಬ ನೇರ ಪ್ರಶ್ನೆ ಹಾಕಿದರು ವೆಂಕಟರಾಮಯ್ಯನವರು.

ಬಾಟ್ಲಿಂಗ್ ಕಂಟ್ರಾಕ್ಟನ್ನು ಒಬ್ಬ ಕಾಂಗ್ರೆಸ್ ಶಾಸಕರ ಮಗನನ್ನೊಳಗೊಂಡು ಹಲವಾರು ಜನರಿಗೆ ಕೊಡಲಾಗಿದೆಂದೂ ಆರೋಪಿಸಿದರು

ಅಪಾಯಕಾರಿ ಔಷಧಗಳು ಮಾರ್ಕೆಟಿನಲ್ಲಿ ಮಾರಾಟವಾಗುತ್ತಿದೆಂದೂ, ಆಸ್ಪತ್ರೆಗಳಿಗೂ ಒದಗಿಸಲಾಗುತ್ತಿದೆಂದೂ, ಇದರ ಕುರಿತು ಔಷಧ ಕಂಟ್ರೋಲ್ ಖಾತೆ ತುರ್ತುಕ್ರಮ ಕೈಗೊಳ್ಳುವ ಅಗತ್ಯವನ್ನು ಒತ್ತಿ ಹೇಳಿದ ವೆಂಕಟರಾಮಯ್ಯನವರು ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿರುವ ವೈದ್ಯರಿಗೆ ನೀಡುತ್ತಿರುವ ರೂ. 50 ಅಲೌನ್ಸ್ ಬಹಳ ಕಡಿಮೆಯಾಗಿದ್ದು, ಅದನ್ನು ಹೆಚ್ಚಿಸಬೇಕೆಂದೂ ಕೇಳಿದರು.

ಸಿ.ಪಿ.ಐ. [ಎಂ] ಶಾಸಕಾಂಗ ಪಕ್ಷದ ಮುಖಂಡರಾದ ಆರ್. ವೆಂಕಟರಾಮಯ್ಯನವರು ಮಾರ್ಚ್ 12 ರಂದು ವಿಧಾನ ಸಭೆಯಲ್ಲಿ ವೈದ್ಯಕೀಯ ಮತ್ತು ಅಬಕಾರಿ ಖಾತೆಯ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಭಾಷಣ ಮಾಡುತ್ತಿದ್ದರು.

ಸಮಾಜವಾದ ಎಂದರೇನು ?

ರಾಜೀವ್‌ಗಾಂಧಿ : ಸದಸ್ಯರೊಬ್ಬರು ಸಮಾಜವಾದದ ಕುರಿತು ಇಲ್ಲಿ ಮಾತಾಡಿದ್ದಾರೆ. ಆಧುನೀಕರಣ ಮಾಡುವ ಮುಂಚೆ ಸಮಾಜವಾದ ತರಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ನಾನು ನಂಬುತ್ತೇನೆ. ನನ್ನಲ್ಲಿ ಸ್ವಲ್ಪ ಗೊಂದಲ ಉಂಟಾಗಿದೆ. ನಮ್ಮ ಮನಸ್ಸಿನಲ್ಲಿ ಏನಿದೆ ? ಸಮಾಜವಾದ ಎಂದರೇನು ? ಆಧುನೀಕರಣವಿಲ್ಲದೆ ನಾವು ಅದನ್ನು ಹೇಗೆ ಜ್ಯಾರಿಗೊಳಿಸುತ್ತೇವೆ ?

ಸುಕುಮೋಲ್ ಸೇನ್ ಸಿ.ಪಿ.ಐ. [ಎಂ] :- ನೀವು ಏನು ಹೇಳುತ್ತಾ ಇದ್ದೀರಾ ?

ಸಮರ ಮುಖರ್ಜಿ :- ಅವರು ನನ್ನನ್ನು ಉದ್ದೇಶಿಸಿ ಹೇಳುತ್ತಿದ್ದಾರೆ. ಈಗ ಜಗತ್ತಿನಲ್ಲಿ ಹಲವಾರು ಸಮಾಜವಾದಿ ದೇಶಗಳಿವೆ. ಅಲ್ಲಿ ನಿರುದ್ಯೋಗವೇ ಇಲ್ಲ. ಆ ದೇಶಗಳೆಲ್ಲ ಅತಿ ಮೇಲ್ಮಟ್ಟದ ತಂತ್ರಜ್ಞಾನದತ್ತ ಮುಂದೆ ಸಾಗುತ್ತಿವೆ. 20ನೆಯ ಶತಮಾನ ಮುಗಿಯುವಷ್ಟರೊಳಗೆ ತಂತ್ರಜ್ಞಾನದಲ್ಲಿ ನಾವು ಶಿಖರ ತಲುಪುತ್ತೇವೆಂತ ಸೋವಿಯತ್ ಸರ್ಕಾರ ಪ್ರಕಟಿಸಿದೆ. ಅಲ್ಲಿ ನಿರುದ್ಯೋಗವಿಲ್ಲ. ಚೀನಾ ದೇಶ ಸಮತಾವಾದಿ ಆಧುನೀಕರಣ ಜಾಹೀರ ಮಾಡಿದ್ದಾರೆ ಅಲ್ಲಿ ಕೂಡ ನಿರುದ್ಯೋಗವೆಂಬುದಿಲ್ಲ. ನಮ್ಮಲ್ಲಿ ನಿರುದ್ಯೋಗ ಸಮಸ್ಯೆ ಭೂತಾಕಾರವಾಗಿದೆ. ಅದು ಬಹಳ ಗಂಭೀರವಾದ ವಿಷಯ. ನಮ್ಮ ಪ್ರಧಾನ ಮಂತ್ರಿಗೆ ಅದು ಗೊತ್ತಿಲ್ಲ.

ವಾಳಶಾಹಿ ಪದ್ಧತಿಯಲ್ಲಿ ತಾಂತ್ರಿಕತೆಯನ್ನು ಉಪಯೋಗಿಸದಿದ್ದರೆ, ಲಕ್ಷಾವಧಿ ಜನ ಕೆಲಸ ಕಳೆದುಕೊಳ್ಳುತ್ತಾರೆ. ಹಾಗಾಗಿ ತಂತ್ರಜ್ಞಾನ ನಿರುಪಯುಕ್ತವಾಗುತ್ತದೆ.

ರಾಜೀವ್‌ಗಾಂಧಿ :- ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನು ಮಾನ್ಯ ಮಾಡುತ್ತೇನೆ.

ಇತ್ತೀಚೆಗೆ ರಾಜ್ಯಸಭೆಯಲ್ಲಿ ಒಂದು ಸ್ವಾರಸ್ಯಕರವಾದ ವಾಗ್ಯುದ್ಧ ನಡೆಯಿತು ಸಮಾಜವಾದ ಎಂಬುದು ನೆಹರೂರವರ ತಲೆಯೊಳಗಿನಿಂದ ಉದ್ಭವಿಸಿದ್ದು ಎಂದು ಭಾವಿಸಿರುವ ರಾಜೀವ ಗಾಂಧಿಯವರ ಅಜ್ಞಾನ ಹೊರಬಿದ್ದಿತು ಸಮರ ಮುಖರ್ಜಿ, ಸುಕೋಮಲ್ ಸೇನ್‌ರವರ ಜೊತೆಗೆ ನಡೆದ ಈ ವಾಗ್ಯುದ್ಧವನ್ನು ಓದಿ

ರಾಜೀವ್‌ಗಾಂಧಿ : ಅಧ್ಯಕ್ಷರೇ, ನಾನು ಶರಣಾಗತನಾಗಿಲ್ಲ.

ಸಮರ ಮುಖರ್ಜಿ :- ಇವುಗಳೆರಡನ್ನೂ ಸೇರಿಸಬೇಕೆಂದು ನಾನು ಹೇಳಿದ್ದೆ. ಹಾಗಾದ್ದಲ್ಲಿ ವಿಜ್ಞಾನ ಮುಂದುವರಿದರೂ ಕೂಡ ಅದರಿಂದಾಗಿ ನಿರುದ್ಯೋಗ ಉಂಟಾಗುವುದಿಲ್ಲ. ಇವೆರಡನ್ನೂ ಒಟ್ಟಿಗೆ ಸೇರಿಸದಿದ್ದರೆ, ಬಂಡವಾಳಶಾಹಿ...

ಸಮರ ಮುಖರ್ಜಿ :- ಸಮಾಜವಾದವೆಂದರೇನೆಂಬುದನ್ನು ವಿವರಿಸಿರಿ.

ರಾಜೀವ್‌ಗಾಂಧಿ : ಸರ್ಕಾರದ ಪರವಾಗಿಯಿಂದ ನಾವು ಸಮಾಜವಾದದ ಕುರಿತು ಮಾತಾಡುವಾಗ ಸಮಾಜವಾದದ ಕುರಿತು ಪಂಡಿತ್ ನೆಹರೂರವರ ನಿರೂಪಣೆಯನ್ನು ನಾವು ನೋಡುತ್ತೇವೆ. ನಮ್ಮ ಧೋರಣೆ

(8ನೇ ಪು. ನೋಡಿ)

ಕ್ರಾಂತಿ ಪಥದಲ್ಲಿ ಅಫ್ಘನ್ ಮಹಿಳೆಯರು

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಇದೇ ಮಾರ್ಚ್ 8 ರಂದು ವಿಶ್ವಾದ್ಯಂತ ಆಚರಿಸಲ್ಪಟ್ಟಿತು. ಈ ಸಂದರ್ಭದಲ್ಲಿ ಆಫ್‌ಘಾನಿಸ್ತಾನದ ಕ್ರಾಂತಿಯಲ್ಲಿ, ಪ್ರತಿ ಕ್ರಾಂತಿಕಾರರ ಧಾಳಿಯನ್ನೆದುರಿಸುವುದರಲ್ಲಿ ಅಲ್ಲಿನ ವೀರವನಿತೆಯರ ಪಾತ್ರವೇನು ? ಮುಂದೆ ಓದಿ

ಆಫ್‌ಘಾನಿಸ್ತಾನದಲ್ಲಿ ಕ್ರಾಂತಿ ಸಂಭವಿಸಿದಾಗ ಮಹಿಳೆಯರಲ್ಲಿ ಶೇ. 99ರಷ್ಟು ನಿರಕ್ಷರಿಗಳಾಗಿದ್ದರು. ಮತ ಸಂಪ್ರದಾಯಗಳ ಬೇಡಿ, ನಿರಂಕುಶ ಆಳ್ವಿಕೆಯ ಕಾರಣದಿಂದಾಗಿ ಮಹಿಳೆಯರು ದಾರುಣವಾದ ದಬ್ಬಾಳಿಕೆ ದೌರ್ಜನ್ಯಕ್ಕೆ ಗುರಿಯಾಗಿ ಬುರಖಾಗಳಲ್ಲಿ ದುರ್ಭರ ಜೀವನ ನಡೆಸುತ್ತಿದ್ದರು. ಪ್ರಾಥಮಿಕ ಶಾಲೆಗಳಲ್ಲಿ ಕಾಲಿಡಲೂ ಅವಕಾಶವಿರಲಿಲ್ಲ.

ಇಂತಹ ಪರಿಸ್ಥಿತಿಯಲ್ಲಿದ್ದ ಮಹಿಳೆಯರನ್ನು ಸಂಘಟಿಸಲು 196. ರಲ್ಲಿ ಅಖಿಲ ಅಫ್‌ಘನ್ ಮಹಿಳಾ ಮಂಡಲಿ ಸ್ಥಾಪನೆಯಾಯಿತು. ಪ್ರಾರಂಭದಲ್ಲಿ ಎಂಟು ಮಂದಿ ಸದಸ್ಯರು ಮಾತ್ರ ಇದ್ದರು ಮಹಿಳೆಯರ ಮೇಲೆ ವಿಧಿಸುವ ಕಂದಾಚಾರ, ದುರಾಚಾರಗಳ ವಿರುದ್ಧ ಹೋರಾಡುವುದಕ್ಕೆ, ಮಹಿಳೆಯರ ಸಂಘಟಿಸುವ ಪ್ರಯತ್ನದಲ್ಲಿ ಸಂಘದ ನಾಯಕಿಯಾದ ಡಾ. ಅನಿಹಿತ ಸೊರೆಯಾಲುರವರು ಅನೇಕ ಕಷ್ಟ ನಷ್ಟಗಳನ್ನೂ ಎದುರಿಸಿ ವಿಶೇಷ ಪ್ರಯತ್ನ ಮಾಡಿದರು. ಕಾಬೂಲ್ ವಿಶ್ವವಿದ್ಯಾಲಯದಲ್ಲಿ ಇವರು '4 ದಿನಗಳ ಸತತ ಮುಷ್ಕರ ಹೂಡಿದರು. ಬುರಖಾ ಇಲ್ಲದೆ ಓಡಾಡುವ ಮಹಿಳೆಯರ ಮೇಲೆ ಆ್ಯಸಿಡ್ ಚೆಲ್ಲುತ್ತಿದ್ದ ಕಾಲವದು.

ಅಂತ ದುರ್ಭರ ಪರಿಸ್ಥಿತಿಯಲ್ಲಿ ಕೂಡ ಅಫಘಾನ್ ಜನತಾ ಪ್ರಜಾಪ್ರಭುತ್ವ ಪಕ್ಷದ ಕಾರ್ಯಕರ್ತರಾಗಿ ಕೆಲಸ ನಿರ್ವಹಿಸಲು ಎಷ್ಟೋ ಜನ ಮಹಿಳೆಯರು ಮುಂದೆ ಬಂದರು. ಅಫಘಾನ್ ಕ್ರಾಂತಿಯಲ್ಲಿ ಅವರು ಪ್ರಧಾನ ಪಾತ್ರ ವಹಿಸಿದರಷ್ಟೇ ಅಲ್ಲ, ಕ್ರಾಂತಿಯ ನಂತರವೂ ಕೂಡಾ ಸರ್ಕಾರದಲ್ಲಿ ಪಕ್ಷದಲ್ಲಿ ಉನ್ನತ ಸ್ಥಾನ ಜವಾಬ್ದಾರಿ ವಹಿಸಿದ್ದಾರೆ ಡಾ. ಅನಿಹಿತಾ ಶಿಕ್ಷಣ ಮಂತ್ರಿಯಾದರು. ದೇಶದ ಆಗು ಹೋಗುಗಳಲ್ಲಿ ಮಹಿಳೆಯರು ಪ್ರಧಾನ ಪಾತ್ರ ವಹಿಸಿದರು. ಈಗ ಅಫಘಾನ್ ಜನತಾ ಪ್ರಜಾಪ್ರಭುತ್ವ ಪಕ್ಷದ ಸದಸ್ಯರಲ್ಲಿ 10% ಮಹಿಳೆಯರು.

ಕ್ರಾಂತಿಯ ನಂತರ ಮೊಟ್ಟಮೊದಲಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಜಾರಿಗೆ ತಂದಿತು. ಮಹಿಳೆಯರಿಗೆ ವಿವಾಹ ವಯಸ್ಸು 16ವರ್ಷಕ್ಕೆ ಪುರುಷರಿಗೆ 18 ವರ್ಷಕ್ಕೆ ಕಡ್ಡಾಯ ಗೊಳಿಸಿ ಶಾಸನ ಮಾಡಲಾಯಿತು. ಅದೇ ರೀತಿ ವರದಕ್ಷಿಣೆ ತೆಗೆದುಕೊಳ್ಳಬಾರದೆಂದು ಆಜ್ಞೆ ಜಾರಿಗೆ ಬಂತು. ವಿವಾಹಕ್ಕೆ ಸಂಬಂಧಿಸಿದಂತೆ ಇಸ್ಲಾಂನ ಯಾವ ನ್ಯಾಯ ಸೂತ್ರಗಳನ್ನು ಬದಲಾವಣೆ ಮಾಡಲಿಲ್ಲ. ಆದರೆ ಇದೇ ಸಂದರ್ಭದಲ್ಲಿ ಪ್ರಜೆಗಳಿಗೆ ತಿಳುವಳಿಕೆ ಕೊಟ್ಟು ಪ್ರಚಾರ ನಡೆಸಲಾಗಿದೆ.

ಸರ್ಕಾರ ಮತ್ತು ಪಕ್ಷದ ಕಾರ್ಯಕರ್ತರ ಪ್ರಚಾರದಿಂದ ತಲ್ಲಾಖ್ ಕೊಡುವುದು ಬಹಳ ಕಡಿಮೆಯಾಗಿದೆ. ಈಗ ತಲ್ಲಾಖ್ ಕೊಡುತ್ತಿರುವವರ ಸಂಖ್ಯೆ ಶೇ. 10 ಕ್ಕಿಂತಲೂ ಕಡಿಮೆಯಾಗಿದೆ. ಅಖಿಲ ಅಫ್‌ಘಾನ್ ಮಹಿಳಾ ಮಂಡಲಿ ವಿವಿಧ ಭಾಗಗಳಾಗಿ ಪುನ ನಿರ್ಮಾಣಗೊಂಡಿದೆ. ಮಹಿಳೆಯರ ಹಕ್ಕುಗಳು, ಕಾನೂನು, ಅಂತರಾಷ್ಟ್ರೀಯ, ಉದ್ಯೋಗ ಎನ್ನುವ ವಿಭಾಗಗಳಾಗಿ ಕಾರ್ಯನಿರ್ವಹಿಸುತ್ತಿವೆ. ಮಹಿಳೆಯರನ್ನು ಜಾಗೃತಿಗೊಳಿಸಲು ಕಾಬೂಲನ್ನು ಕೇಂದ್ರವಾಗಿಟ್ಟುಕೊಂಡು ಪಟ್ಟಣಗಳಲ್ಲಿ 29 ಮಹಿಳಾ ಮಂಡಲಿಗಳು, ಗ್ರಾಮಾಂತರ ಪ್ರದೇಶದಲ್ಲಿ 18 ಮಹಿಳಾ ಮಂಡಲಿಗಳು ಕೆಲಸ ನಿರ್ವಹಿಸುತ್ತಿವೆ. ಮುಖ್ಯವಾಗಿ ಮಹಿಳೆಯರಿಗೆ ಶಿಕ್ಷಣ ನೀಡುವುದೇ ಇವುಗಳ ಗುರಿ.

ಪುರುಷರು ವಿರೋಧಿಸಿದರೂ ಮಹಿಳಾ ಕಾರ್ಯಕರ್ತರು ಪ್ರಾರಂಭಿಸಿರುವ ಈ ಶಿಕ್ಷಣ ಕಾರ್ಯದಲ್ಲಿ 18, 481 ಮಂದಿ ಮಹಿಳೆಯರು ತಮ್ಮ ಹೆಸರುಗಳನ್ನು ನೊಂದಾಯಿಸಿದ್ದಾರೆ. 3, 845 ಮಹಿಳೆಯರು ಮನೆಯ ಹತ್ತಿರವೇ ವಿದ್ಯೆ ಕಲಿಯುತ್ತಿದ್ದಾರೆ. ಮನೆಗೆಲಸ, ಮಕ್ಕಳ ಪಾಲನೆ-ಪೋಷಣೆ, ಗೋಲಿಗೆ, ಕಸೂತಿ ಕೆಲಸಕ್ಕೆ ಸಂಬಂಧಿಸಿದಂತೆ ಮಹಿಳೆಯರಿಗೆ ಶಿಕ್ಷಣ ಒದಗಿಸಲು 90 ಮಹಿಳಾ ಕ್ಲಬ್‌ಗಳು ಕೆಲಸ ನಿರ್ವಹಿಸುತ್ತಿವೆ. ಮುಖ್ಯವಾಗಿ ಮಹಿಳಾ ಕಾರ್ಯಕರ್ತರು ಮನೆ ಮನೆಗೂ ತಿರುಗಿ ಕುಟುಂಬ ನಿಯಂತ್ರಣ ಅವಶ್ಯಕತೆಯನ್ನು ಬೋಧಿಸುತ್ತಿದ್ದಾರೆ. ಈ ವಿಷಯದಲ್ಲಿ ಮಹಿಳೆಯರು ಗಣನೀಯವಾದ ಪ್ರಯೋಜನ ಹೊಂದಿದರು.

ಸುಮಾರು 2700 ಮಹಿಳೆಯರು ಕ್ರಾಂತಿಯ ರಕ್ಷಣೆಯ ದಳಗಳ ಸೇರಿ ಅದ್ಭುತವಾದ ಧೈರ್ಯ ಸಾಹಸಗಳು ಪ್ರದರ್ಶಿಸುತ್ತಿದ್ದಾರೆ. ಪ್ರತಿಕ್ರಾಂತಿಕಾರಿಗಳಿಗೆ ತಮ್ಮ ಗಂಡಂದಿರು ಮಕ್ಕಳು ಬಲಿಯಾಗುತ್ತಿರುವಾಗ ಎಷ್ಟೋ ಜನ ಮಹಿಳೆಯರು ಆಯುಧಗಳನ್ನು ಕೈಯಲ್ಲಿ ಹಿಡಿದು ಹೋರಾಟರಂಗದಲ್ಲಿ ಧುಮುಕಿದರು. ಪ್ರತಿಕ್ರಾಂತಿಗಳಿಂದ ಗಾಯಗೊಂಡವರಿಗೆ ಸೇವೆ ಮಾಡಲು ಮಹಿಳೆಯರು ಕೂಡಾ ಕೈಯಲ್ಲಿ ಆಯುಧ ಹಿಡಿದು ಕ್ರಾಂತಿಯನ್ನು ರಕ್ಷಿಸುತ್ತಿದ್ದಾರೆ. ಈ ಮಹಿಳಾ ದಳಗಳಿಗೆ ಇಬ್ಬರು ನಾಯಕತ್ವ ವಹಿಸುತ್ತಿದ್ದರು. ಒಬ್ಬ ಮಹಿಳೆ ರೈತ ಕುಟುಂಬದಿಂದ ಬಂದಿದ್ದಾರೆ ಮತ್ತೊಬ್ಬರು ಗಿರಿಜನ ಕುಟುಂಬದವರಿಂದ ಬಂದಿದ್ದಾರೆ ಶಿಪಿಜಾಲ ಎನ್ನುವ ಈ ಗಿರಿಜನ ಮಹಿಳೆ ವೀರಾಂಗನೆಯಾಗಿ ಪ್ರಸಿದ್ಧಿ ಪಡೆದಳು.

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಾದ ಮಾರ್ಚ 8ರಂದು ವಿವಿಧ ಪ್ರಾಂತಗಳಲ್ಲಿ ಮಹಿಳೆಯರು ಅನೇಕ ಕಾರ್ಯಕ್ರಮಗಳನ್ನು ನಡೆಸಲು ಉತ್ಸಹಕರಾಗಿದ್ದಾರೆ. 1985ರಲ್ಲಿ ಸುಮಾರು 60 ಸಾವಿರ ಮಹಿಳೆಯರು ಸೇರಿ ಮಹಿಳಾ ದಿನಾಚರಣೆ ಆಚರಿಸಿದರು. ಇದರ ಜೊತೆ ಜೊತೆಯಲ್ಲೇ ಮಹಿಳಾ ಮಂಡಲಿಗಳು ಅನೇಕ ಕಡೆ ಶಾಂತಿಯಾತ್ರೆಗಳನ್ನೂ ನಡೆಸಿತು.

ಶ್ರಮಿಕರಾಗಿ ಮಹಿಳೆಯರು ಗಣನೀಯ ಪ್ರಮಾಣದಲ್ಲಿ ಹೆಚ್ಚಾಗುತ್ತಿದ್ದಾರೆ. 1978ರಲ್ಲಿ 5ಸಾವಿರ ಮಹಿಳಾ ಕಾರ್ಮಿಕರಿದ್ದರು. ಈಗ 2,45,994 ಮಹಿಳಾ ಕಾರ್ಮಿಕರಾಗಿದ್ದಾರೆ.

ಸರ್ಕಾರೀ ಸಂಸ್ಥೆಗಳಲ್ಲೂ, ಸುಮಾರು 4ಸಾವಿರ ಮಹಿಳೆಯರು ಕೆಲಸ ನಿರ್ವಹಿಸುತ್ತಿದ್ದಾರೆ. ಶಿಕ್ಷಣ, ವೈದ್ಯಕೀಯ, ರಾಜಕೀಯ ರಂಗಗಳಲ್ಲಿ ಕೂಡಾ ಸ್ತ್ರೀಯರು ಬಹಳ ಉತ್ಸಾಹಕರಾಗಿ ಪಾಲ್ಗೊಳ್ಳುತ್ತಿದ್ದಾರೆ. ವಿವಿಧ ರಂಗಗಳಲ್ಲಿ ಕೆಲಸಮಾಡುತ್ತಿರುವ ಸ್ತ್ರೀಯರು ಬುರಖಾಗಳನ್ನೂ ತೆಗೆದುಹಾಕಿರುವುದಷ್ಟೇ ಅಲ್ಲ, ಆಧುನಿಕ ರೀತಿಯ ಉಡುಪುಗಳನ್ನೂ ಕೂಡಾ ಧರಿಸುತ್ತಿದ್ದಾರೆ. ಕಾರ್ಯಾಲಯಗಳಲ್ಲೂ, ಸಮಷ್ಟಿ ಕ್ಷೇತ್ರಗಳಲ್ಲೂ, ಸಮವಸ್ತ್ರ ಜಾರಿಮಾಡಿರುವ ಸರಕಾರದ ನೀತಿಯನ್ನೂ ಮಹಿಳೆಯರು ಹೃತ್ಪೂರ್ವಕವಾಗಿ ಸ್ವಾಗತಿಸಿದ್ದಾರೆ. ○

ತೆಲುಗು ಮೂಲ :
ಆರ್. ಸಿ. ಎಚ್. ಮೂರ್ತಿ
ಸಂಗ್ರಹ :
ಕೆ. ಶಾಂತಕುಮಾರಿ

ಪ್ರಾಂತ ರೈತ ಸಂಘ ಸುದ್ದಿ - ಸಮಾಚಾರ

ಸರದಿ ಉಪವಾಸ ಸತ್ಯಾಗ್ರಹ ಹುಣಸೂರು

ಕರ್ನಾಟಕ ಪ್ರಾಂತ ರೈತ ಸಂಘದ ಹುಣಸೂರು ತಾಲ್ಲೂಕು ಸಮಿತಿ ಫೆ. 16 ರಿಂದ ನಡೆಸುತ್ತಿದ್ದ ಸರದಿ ಉಪವಾಸ ಮುಷ್ಕರ ಅಂತ್ಯಗೊಂಡಿದೆ. ಬಗರ ಹುಕುಂ ಸಾಗುವಳಿ ಪತ್ರ ಮತ್ತು ರೈತರ ಇತರ 5 ಬೇಡಿಕೆಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದರಿಂದ ಮತ್ತು ರೆವಿನ್ಯೂ ಭೂಮಿಯಲ್ಲಿ ಸಾಗುವಳಿ ನಡೆಸುತ್ತಿರುವ ರೈತರಿಗೆ ಯಾವುದೇ ತೊಂದರೆ ನೀಡದೆ ಸರ್ಕಾರದ ಆದೇಶ ಬಂದಕೂಡಲೇ ಸಾಗುವಳಿ ಪತ್ರ ನೀಡಲಾಗುವುದೆಂದು ತಹಸೀಲ್ದಾರ್ ಅವರು ನೀಡಿದ ಭರವಸೆಯ ಮೇರೆಗೆ ಉಪವಾಸ ಮುಷ್ಕರವನ್ನು ಅಂತ್ಯಗೊಳಿಸಲಾಗಿದೆ. ಫೆ. 19 ರಂದು ನಡೆದ ರೈತ ಮುಖಂಡರ ಮತ್ತು ತಹಸೀಲ್ದಾರರ ನಡುವೆ ನಡೆದ ಮಾತುಕತೆಯಲ್ಲಿ ಕಾರ್ಮಿಕ ಮುಖಂಡರಾದ ಕಾ. ಆರ್. ಮೋಹನ್ ಕುಮಾರ್, ರೈತ ಸಂಘದ ಕಾರ್ಯದರ್ಶಿ ಕಾ. ಅಣ್ಣಪ್ಪ, ಅಧ್ಯಕ್ಷರಾದ ಕಾ. ಕೆ.ಕೆ. ಗೋಪಾಲನ್ ಮುಂತಾದವರು ಭಾಗವಹಿಸಿದ್ದರೆಂದು ಹೇಳಿಕೆ ತಿಳಿಸಿದೆ.

ಭದ್ರಾವತಿ

ಭದ್ರಾ ಬಲದಂಡೆಯ ಮುಖ್ಯನಾಲೆ ಅಂತರ ಗಂಗೆ ಸಮೀಪದ ಉಪವಿಭಾಗ ನೀರು ವಿತರಣ ನಾಲೆಯಲ್ಲಿ ಅಸಮರ್ಪಕವಾಗಿ ನೀರು ಸರಬರಾಜು ಮಾಡುತ್ತಿರುವುದರಿಂದ ಅಂತರಗಂಗೆ ಕ್ಯಾಂಪು, ಕೋರ್ಲಾಪುರ, ದೇವರ ನರಸೀಪುರ, ಬೋ ಕಾಲೋನಿ. ಗಾಂಧಿ ನಗರ, ತಾಪ್ಕೆಂಟ್ ನಗರ, ಎರೆಹಳ್ಳಿ, ಬಸಾಪುರ, ಕರಿಚೆಗೊಂಡನಹಳ್ಳಿ ಮತ್ತಿತರ ಗ್ರಾಮಗಳಿಗೆ ಕುಡಿಯುವ ನೀರು ಸಿಕ್ಕುವುದೇ ಕಷ್ಟವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ ಹಳ್ಳಿಗಾಡಿನ ಜನತೆಯ ನೀರಿನ ಸಮಸ್ಯೆಯನ್ನು ನಿವಾರಿಸಬೇಕೆಂದು ಸಿ. ಪಿ. ಐ. (ಎಂ) ನ ಭದ್ರಾವತಿ ತಾಲ್ಲೂಕು ಸಮಿತಿ ಮತ್ತು ರೈತ ಸಂಘ ಒತ್ತಾಯಿಸಿದೆ.

ಶಾಸಕರ ರಾಜೀನಾಮೆಗೆ ಒತ್ತಾಯ

ಬೆಂಗಳೂರು : ಮಾರ್ಚ್ 5ರಂದು ಬೆಂಗಳೂರು ದಕ್ಷಿಣ ತಾಲ್ಲೂಕು ಭೂನ್ಯಾಯ ಮಂಡಳಿ ಸಭೆ ನಡೆಯುತ್ತಿದ್ದಾಗ ಅದೇ ಕ್ಷೇತ್ರದ ಗೇಣಿದಾರರಾದ ರಾಘವಯ್ಯ ಎಂಬುವರು ಫಿರ್ಯಾದು ನೀಡಲು ಅಲ್ಲಿಗೆ ಹೋದಾಗ ಉತ್ತರ ಹಳ್ಳಿ ಕ್ಷೇತ್ರದ ಜನತಾ ಪಕ್ಷದ ಶಾಸಕರಾದ ಎಂ. ಶ್ರೀನಿವಾಸ ಫಿರ್ಯಾದುದಾರರನ್ನು ಅವಾಚ್ಯವಾಗಿ ಬೈದು ಬೂಟನಿಂದ ಹೊಡೆಯಲು ಪ್ರಯತ್ನಿಸಿರುವುದನ್ನು ರೈತ ಸಂಘವು ತೀವ್ರವಾಗಿ ಖಂಡಿಸಿದೆ. ಅನಧಿಕೃತವಾಗಿ ಭೂನ್ಯಾಯ ಮಂಡಳಿ ಸಭೆಯಲ್ಲಿ ಪ್ರವೇಶಿಸಿ, ರೈತ ವಿರೋಧಿಯಾಗಿ ವರ್ತಿಸಿರುವುದನ್ನು, ರೈತರಿಂದ ಮತ ಪಡೆದು ರೈತ ಕಾರ್ಮಿಕರನ್ನು ಒಕ್ಕಲೆಬ್ಬಿಸುತ್ತಿರುವುದನ್ನು ರೈತ ಸಂಘ ಉಗ್ರವಾಗಿ ಖಂಡಿಸಿದೆ.

ಶಾಸಕ ಶ್ರೀನಿವಾಸ್ ಅವರು ಉತ್ತರಹಳ್ಳಿ ಕ್ಷೇತ್ರದ ಅಭಿವೃದ್ಧಿಯ ಕಡೆ ಗಮನ ನೀಡದೆ ಫ್ಯಾಕ್ಟರಿ ಮಾಲೀಕರ, ಭೂ ಮಾಲೀಕರ ಏಜೆಂಟರಾಗಿ ರೈತ ಕಾರ್ಮಿಕರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದಾರೆ. ಸದರಿ ಶಾಸಕರು ಮಾಲೀಕರಾಗಿರುವ ಫ್ಯಾಕ್ಟರಿಯಲ್ಲೇ ಕಾರ್ಮಿಕರ ಮೇಲೆ ದೌರ್ಜನ್ಯ ನಡೆಸಿ ಅವರನ್ನು ಬೀದಿಪಾಲು ಮಾಡಿದ್ದಾರೆ. ಇದೇ ರೀತಿ ರಾಜಕುಮಾರ್ ಮಿಲ್ ಮಾಲೀಕರಿಗೆ ಬೆಂಬಲ ಕೊಟ್ಟು ನೂರಾರು ಕಾರ್ಮಿಕರನ್ನು ಬೀದಿ ಪಾಲು ಮಾಡಿದ್ದಾರೆ.

ರಾಘವಯ್ಯನ ವಿಚಾರದಲ್ಲಿ ಶಾಸಕ ಶ್ರೀನಿವಾಸ್ ಮೇಲೆ ಅಲಸೂರು ಗೇಟ್ ಪೋಲೀಸರು ಮೊಕದ್ದಮೆ ದಾಖಲು ಮಾಡಿಕೊಂಡಿರುವುದರಿಂದ ಕೂಡಲೇ ಶಾಸಕರು ರಾಜೀನಾಮೆ ನೀಡಬೇಕೆಂದು ರೈತ ಸಂಘ ಆಗ್ರಹಪಡಿಸಿದೆ.

ಮಂಗಳೂರು ತಾಲ್ಲೂಕು ರೈತ ಸಂಘದ ಸಭೆ ಫೆ. 28ರಂದು ಕಾ. ಬಿ. ಬಾಬು ಪೂಜಾರಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾ. ರಾಮಚಂದ್ರ ಉಚ್ಚಿಲ್, ಕಾ. ಅಬ್ರಹಾಂ ಕರ್ಕಡ, ಕಾ. ಬಿ. ಮಾಧವ, ಕಾ. ಜನಾರ್ಧನ ನಾಯಕ್, ಕಾ. ಸ.ಕುಮಾರ್ ಮುಂತಾದವರು ಮಾತನಾಡಿ ರೈತರ ಸಮಸ್ಯೆಗಳ ಬಗ್ಗೆ ವಿವರಿಸಿದರು.

ಪದ್ಮಲತಾ ಕೊಲೆ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಿ ತಪ್ಪಿತಸ್ತರಿಗೆ ಉಗ್ರಶಿಕ್ಷೆ ನೀಡಬೇಕೆಂದು ಸಭೆ ಒತ್ತಾಯಿಸಿದೆ. ○

ರಾತ್ರಿ ಪಾಠಶಾಲೆಯ 18ನೇ ವಾರ್ಷಿಕೋತ್ಸವ

ಬೆಂಗಳೂರು - ಡಿ.ವೈ.ಎಫ್.ಐ ನ ಬೆಂಗಳೂರು ನಗರ ಆರ್ .ಜಿ. ಐ. ಕಾಲೋನಿ ಘಟಕದ ಆಶ್ರಯದಲ್ಲಿ ನಡೆಯುತ್ತಿರುವ ಉಚಿತ ರಾತ್ರಿ ಪಾಠಶಾಲೆಯ 15ನೇ ವಾರ್ಷಿಕೋತ್ಸವವನ್ನು ಫೆ. 22ರಂದು ಆಚರಿಸಲಾಯಿತು. ಈ ಸಂದರ್ಭದಲ್ಲಿ ಬಹಿರಂಗ ಸಭೆಯಲ್ಲಿ ಅಖಿಲ ಭಾರತ ವಕೀಲರ ಸಂಘದ ಸಂಗಾತಿಗಳ ಸಹಕಾರದಿಂದ ಮಕ್ಕಳಿಗೆ ಸಮವಸ್ತ್ರ ಮತ್ತು ನೋಟ್‌ಪುಸ್ತಕಗಳನ್ನು ವಿತರಣೆ ಮಾಡಲಾಯಿತು.

ವಕೀಲರ ಸಂಘದ ಕಾಂ. ನಾಗಮೋಹನದಾಸ್ ಅವರು ಸಭೆಯಲ್ಲಿ ಮಾತನಾಡಿ ಡಿ.ವೈ.ಎಫ್.ಐ.ನ ಈ ಕಾರ್ಯಕ್ರಮವನ್ನು ಪ್ರಶಂಸಿಸಿ, ಡಿ.ವೈ.ಎಫ್.ಐ.ನ ಬೇಡಿಕೆಯಾದ 'ಸರ್ವರಿಗೂ ಶಿಕ್ಷಣ ಸರ್ವರಿಗೂ ಉದ್ಯೋಗ' ಘೋಷಣೆಯ ಬಗ್ಗೆ ವಿವರಿಸಿದರು. ಸಂಘದ ಮತ್ತೊಬ್ಬ ಸಂಗಾತಿ ಕಾಂ. ಶಂಕರಪ್ಪ ಅವರು ಸಮ ವಸ್ತ್ರ ಮತ್ತು ಪುಸ್ತಕ ವಿತರಣೆ ಮಾಡಿ ಡಿ.ವೈ.ಎಫ್.ಐ.ನ್ನು ಕಟ್ಟಿಬೆಳಿಸಬೇಕೆಂದು ಕರೆ ನೀಡಿದರು.

ಸಭೆಯಲ್ಲಿ ಉಪಸ್ಥಿತರಿದ್ದ 'ಮಾರ್ದನಿ' ಪತ್ರಿಕೆಯ ಸಂಪಾದಕರಾದ ಜಾಣಗೆರೆ ವೆಂಕಟರಾಮಯ್ಯನವರು ಡಿ.ವೈ.ಎಫ್.ಐ. ಪಾಠಶಾಲೆಗೆ ಹೆಚ್ಚು ಜನಸೇರಲೀ ಕೆಂದೂ, ಸರಕಾರೀ ಪಠ್ಯಕ್ರಮದಿಂದ ಬೌದ್ಧಿಕ ಬೆಳವಣಿಗೆ ಪೂರ್ಣಗೊಳ್ಳುವುದಿಲ್ಲವೆಂದೂ ತಿಳಿಸಿದರು.

ಡಿ.ವೈ.ಎಫ್.ಐ ನ ಸಂಚಾಲಕರು ಪಾಠಶಾಲೆಯ ಬೆಳವಣಿಗೆಯ ಬಗ್ಗೆ ವಿವರಿಸಿದರು. ಪಾಠಶಾಲೆಯ ಮುಖ್ಯೋಪಾಧ್ಯಾಯರಾದ ಕಾಂ. ಡಿ.ಶಿವಶಂಕರ್ ಸ್ವಾಗತಿಸಿದರು. ಕಾ.ಎನ್. ರಾಜಣ್ಣ ವಂದನಾರ್ಪಣೆ ಮಾಡಿದರು.

"ಅದು ಧರ್ಮಸ್ಥಳವಲ್ಲ, ಅಧರ್ಮಸ್ಥಳ. ಅಲ್ಲಿ ದೇವರಿಲ್ಲ."

"ಧರ್ಮಸ್ಥಳವಲ್ಲ ಅದು ಅಧರ್ಮ ಸ್ಥಳ. ಅಲ್ಲಿ ದೇವರಿಲ್ಲ" ಇದು ಒಬ್ಬ ತಂದೆಯ ಹೃದಯದಿಂದ ನುಡಿದ ನೋವಿನ ಕಿಡಿಗಳು. ಈ ಕಿಡಿಗಳು ಕೇಳುತ್ತಿದ್ದ ಎರಡು ಸಾವಿರಕ್ಕೂ ಹೆಚ್ಚಿನ ಕೇಳುಗರ ಹೃದಯಕ್ಕೆ ನೇರವಾಗಿ ತಾಗಿದುವು. ದಿನಾಂಕ 6.3.87 ರಂದು ಮಂಗಳೂರಿನ ನೆಹರೂ ಮೈದಾನದಲ್ಲಿ ನಡೆದ ಒಂದು ಸಭೆಯಲ್ಲಿ ಈ ಮಾತುಗಳನ್ನಾಡಿದವರು, ಧರ್ಮಸ್ಥಳದ ಪಟ್ಟಭದ್ರ ಹಿತಗಳು ತಮ್ಮ ಅಧಿಕಾರ ದಾಹಕ್ಕೆ ಬಲಿಕೊಂಡ ಪದ್ಮಲತಾ ಎಂಬ ತರುಣಿಯ ತಂದೆ ದೇವಾನಂದ್‌ರವರು. ಈ ತಂದೆಯ ಅಳಲು ಅವರು ಅಂದು ಆಡಿದ ಈ ಎರಡೇ ಮಾತುಗಳ ಮಾತುಗಳಲ್ಲಿ ಪಡಿಮೂಡಿತ್ತು.

ಏಳು ಜನ ಪ್ರಸಿದ್ಧ ಸಾಹಿತಿಗಳು, ಸಮಾಜ ಸೇವಾ ಕಾರ್ಯಕರ್ತರು-ಸಾರಾ ಅಬೂಬಕ್ಕರ್, ಡಾ|| ಪುರುಷೋತ್ತಮ ಬಿಳಿಮಲೆ, ಫಕೀರ್ ಮಹಮದ್, ಕಟ್ಪಾಡಿ, ಗೀತಾ ಸುರತ್ಕಲ್, ನರೇಂದ್ರ ನಾಯಕ್, ಪ್ರಾಂತ ರೈತ ಸಂಘದ ವಿಷ್ಣುಮೂರ್ತಿ, ಭಾರತ ವಿದ್ಯಾರ್ಥಿ ಫೆಡರೇಷನ್‌ನ ಸುನೀಲ್ ನಟೇಕರ್ ಇವರು ಸಂಚಾಲಕರಾಗಿರುವ "ಉಜಿರೆ ಪದ್ಮಲತಾ ಕೊಲೆ ಪ್ರಕರಣ ಹೋರಾ ಸಮಿತಿ" ದಿನಾಂಕ 6.3.87 ರಂದು ಮಂಗಳೂರಿನಲ್ಲಿ ಪ್ರತಿಭಟನಾ ಮೆರವಣಿಗೆ ಹಾಗೂ ಬಹಿರಂಗ ಸಭೆಯನ್ನು ಏರ್ಪಡಿಸಿತ್ತು. ಅಧ್ಯಾಪಕ, ಅಧ್ಯಾಪಕಿಯರು, ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಬೀಡಿ ಕಾರ್ಮಿಕರು ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದ ಮೆರವಣಿ 2 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದ ಸಭೆ ಒಂದು ಅಪೂರ್ವ ಸಭೆ.

ಶತ ಶತಮಾನಗಳಿಂದ ನಮ್ಮ ದೇಶದ ಮಹಿಳೆಯರು ಅನುಭವಿಸುತ್ತಿರುವ ನೋವು ಕೊನೆಯಾಗುವುದೆಂದಿಗೆ ? ಪಾಳೆಯಗಾರಿ ರಕ್ಕಸರ ಮುಷ್ಟಿಯಿಂದ ಬಿಡುಗಡೆ ಎಂದಿಗೆ ?

ಏಕೆಂದರೆ ಇದೆ ರಾಜ್ಯದಲ್ಲಿಯೇ ವ್ಯಾಪಕ ಪ್ರಭಾವ ಇರುವ ಮುಖ್ಯ ಮಂತ್ರಿ ಪ್ರಧಾನ ಮಂತ್ರಿಗಳು ಹೋಗಿ ಮಣಿದು ತಂಗಿ ಬರುವ ಧಾರ್ಮಿಕ ಕ್ಷೇತ್ರದ ಮುಖಂಡರನ್ನೇ ಎದುರಿಸಿ ಜನರನ್ನು ನೆರೆಸುವ, ಎಚ್ಚರ ಗೊಳಿಸುವ ಸಭೆ. ರಾಜ್ಯಾದ್ಯಂತ ಅನೇಕ ನಗರಗಳಲ್ಲಿ ಆಸ್ತಿ ಪಾಸ್ತಿಗಳನ್ನು ಹೊಂದಿರುವ, ಅನೇಕ ಶಾಲಾ ಕಾಲೇಜುಗಳನ್ನು ಹೊಂದಿರುವ, ಧರ್ಮಸ್ಥಳದಲ್ಲಿ ಹಾಗೂ ಸುತ್ತಮುತ್ತಲಿನ ತಾಲ್ಲೂಕಿನಲ್ಲಿ 12,000ಕ್ಕೂ ಹೆಚ್ಚು ಎಕ್ಕರೆಗಳಷ್ಟು ಸಕ್ರಮ ಹಾಗೂ ಅಕ್ರಮ ಭೂಮಿ ಹೊಂದಿರುವ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರು ಹಾಗೂ ಸಹಚರರು ಕರ್ನಾಟಕದಲ್ಲಿ ಪಾಳೆಯಗಾರಿ ಮೌಲ್ಯಗಳ ಪ್ರಭುತ್ವದ ಒಂದು ದೊಡ್ಡ ಆಧಾರ, ನೆಲೆ. ಪಾಳೆಯಗಾರಿ ಪ್ರಭುತ್ವವೆಂದ ಕೂಡಲೆ ಅದರೊಡನೆಯೇ ಧಾಳಿ ದಬ್ಬಾಳಿಕೆಗಳು ಹಿಂಸೆ, ಮಾನಭಂಗಗಳು ಇರದಿರಲು ಸಾಧ್ಯವೇ ? ನಮ್ಮ ಮಧ್ಯೆ ಇನ್ನೂ ಜೀವಂತವಾಗಿರುವ, ನಮ್ಮೆಲ್ಲರನ್ನೂ ಶತಮಾನಗಳ ಕಾಲ ಹಿಂದೆ ಜಗ್ಗಲು ಪ್ರಯತ್ನಿಸುತ್ತಿರುವ ಪಾಳೆಯಗಾರಿ ಮೌಲ್ಯಗಳ ಹಿಡಿತದ ಕ್ರೂರತೆಗೆ ಅಮಾನವೀಯತೆಗೆ, ಕುದುರೇ ಮೋತಿ ಒಂದು ಪ್ರತೀಕವಾದರೆ ಅದಕ್ಕಿಂತ ಮುಂದುವರೆದು ರಾಜಕೀಯ ಸೇಡು ತೀರಿಸಿಕೊಳ್ಳಲು ಹೆಣ್ಣೊಬ್ಬಳನ್ನು ಆಹುತಿ ಪಡೆದ ಧರ್ಮಸ್ಥಳ ಮತ್ತೊಂದು ಉದಾಹರಣೆ.

ಈ ಸಭೆಯ ಆರಂಭದಲ್ಲಿ ಡಾ|| ಪುರುಷೋತ್ತಮ ಬಿಳಿಮಲೆಯವರು "ಇದು ನಿಮ್ಮನ್ನೆಲ್ಲಾ ಸಂತೋಷದಿಂದ ಸ್ವಾಗತ ಮಾಡುವಂತಹ ಸಭೆಯಲ್ಲ ಇಂತಹ ಸಮಾವೇಶಗಳು ನಡೆಯಬೇಕಾದ ಅವಶ್ಯಕತೆ ಬರದಿರಲಿ ಎಂದೇ ಆಶಿಸಬೇಕು ಎನ್ನುತ್ತಲೇ ಜನರನ್ನು ಸ್ವಾಗತಿಸಿ ಧರ್ಮಸ್ಥಳದಲ್ಲಿ ನಡೆದ ಘೋರ ಘಟನೆಗೆ ಪತ್ರಿಕೆಗಳು ಪ್ರತಿಕ್ರಿಯಿಸಿದ ರೀತಿಯನ್ನು ಟೀಕಿಸಿದರು. ಧರ್ಮಸ್ಥಳದಿಂದ ಮಂಗಳೂರಿಗೆ ಬಂದ ಹೆಗ್ಗಡೆಯವರಿಗೆ ಜಯಘೋಷ ಹಾಕಿದ ನೂರು ನೂರೈವತ್ತು ಜನರಿದ್ದ ಮೆರವಣಿಗೆಯ ಬಗ್ಗೆ ಸಾವಿರಾರು ಜನರ ಮೆರವಣಿಗೆ ಎಂದು ವರ್ಣಿಸಿರುವ ಮಂಗಳೂರಿನ ಪತ್ರಿಕೆಗಳು ಪದ್ಮಲತಳ ಸಾವಿನ ಬಗ್ಗೆ ತಮ್ಮ ಕಳವಳವನ್ನು ಅದಕ್ಕೆ ಕಾರಣರಾಗಿರುವ ವಿರೇಂದ್ರ ಹೆಗ್ಗಡೆಯವರ ಭಂಟರ ಬಗ್ಗೆ ಕ್ರೋಧವನ್ನು ವ್ಯಕ್ತಪಡಿಸುವುದಕ್ಕಾಗಿ ನಿಜವಾಗಿಯೂ ಸಾವಿರಾರು ಜನರು ಭಾಗವಹಿಸಿರುವ ಈ ಸಭೆಯಲ್ಲಿ 20-30 ಜನರೂ ಇರಲಿಲ್ಲವೆಂದು ಈ ಪತ್ರಿಕೆಗಳು ನಾಳೆ ವರ್ಣಿಸಿದರೆ ಆಶ್ಚರ್ಯವೇನಲ್ಲ ಎಂದರು.

ಮತ್ತೊಬ್ಬ ಸಾಹಿತಿ ಫಕೀರ್ ಮಹಮದ್ ಕಟ್ಪಾಡಿಯವರು ಡಾ|| ಹೆರ್ಳೆಯವರು ಈ ಸಾವಿನ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿ ಬರೆದ ಪತ್ರವನ್ನು ಓದಿದರು. ಉಜಿರೆಯ ಮಂಜುನಾಥೇಶ್ವರ ಕಾಲೇಜಿನಲ್ಲಿ ಉಪನ್ಯಾಸಕಿಯಾಗಿ ಕೆಲಸಮಾಡುತ್ತಿದ್ದು ಕೇವಲ ತಮ್ಮ ಹಕ್ಕಿಗಾಗಿ ಹೋರಾಡಿದ ಕಾರಣಕ್ಕಾಗಿ ಇದೇ ಧರ್ಮಸ್ಥಳದ ಹೆಗ್ಗಡೆಯ

[6ನೇ ಪುಟ ನೋಡಿ]

ವಿಧಾನ ಸಭೆಯಲ್ಲಿ ವೆಂಕಟರಾಮಯ್ಯನವರಿಂದ ಪ್ರಶ್ನೆ ಸಚಿವ ರಾಚಯ್ಯನವರಿಂದ ಸ್ಥಳಕ್ಕೆ ಭೇಟಿ

ಸಿ. ಪಿ. ಐ [ಎಂ]ನ ವಿಧಾನಸಭಾ ಸದಸ್ಯರಾದ ಕಾಂ. ವೆಂಕಟರಾಮಯ್ಯನವರು ದಿನಾಂಕ 2-3-87 ರಂದು ವಿಧಾನ ಸಭೆಯಲ್ಲಿ ಕುಮಾರಿ ಪದ್ಮಲತಾರವರ ಸಾವಿನ ಬಗ್ಗೆ ಸರ್ಕಾರ ಆಸಕ್ತಿ ತಳೆಯದ ಬಗ್ಗೆ, ಧರ್ಮಸ್ಥಳದ ಹೆಗ್ಗಡೆ ಕುಟುಂಬದ ಕುಮ್ಮಕ್ಕಿನಿಂದ ನಡೆದಿರುವ ಈ ಕೊಲೆಯ ಬಗ್ಗೆ ಅವರ ಪ್ರಭಾವಕ್ಕೆ ಮಣಿದಿರುವ ಬಗ್ಗೆ ಪ್ರಶ್ನಿಸಿದರು. ಮಂಡಲ ಪಂಚಾಯ್ತಿ ಜಿಲ್ಲಾ ಪರಿಷತ್ ಚುನಾವಣೆಗಳ ಸಮಯದಲ್ಲಿ ಅಲ್ಲಿ ಪಕ್ಷದ ಅಭ್ಯರ್ಥಿಗಳು ನಿಲ್ಲಬಾರದೆಂಬ ಅವರ ಬೆನ್ನ ಹಿಂದಿನ ಪ್ರಮುಖ ವ್ಯಕ್ತಿ ಚುನಾವಣೆಗಳಲ್ಲಿ ಕೆಲಸ ಮಾಡಬಾರದೆಂಬ ದುರುದ್ದೇಶದಿಂದ ಪದ್ಮಲತಾರವರನ್ನು ಅಪಹರಿಸಲಾಗಿತ್ತು. ನಂತರ ಕೊಲೆ ಮಾಡಲಾಗಿದೆ ಎಂದು ಆಪಾದಿಸಿದರು.

ಈ ಬಗ್ಗೆ ಸರ್ಕಾರ ಕೂಡಲೇ ಪದ್ಮಲತಾ ಕುಟುಂಬದವರಿಗೆ ಎಲ್ಲ ರಕ್ಷಣೆ ಕೊಡಬೇಕೆಂದೂ ಹಾಗೂ ಈ ಹೀನ ಕೃತ್ಯಕ್ಕೆ ಕಾರಣರಾದವರ ಬಗ್ಗೆ ವಿಶೇಷ ತನಿಖೆ ನಡೆಸಿ ಶೀಘ್ರ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು.

ಇದಕ್ಕೆ ಕೇಸು ದಾಖಲು ಮಾಡಿಕೊಳ್ಳಲಾಗಿದೆ. ತನಿಖೆ ಮುಂದುವರೆದಿದೆ ಎಂಬ ಮಾಮೂಲಿ ಉತ್ತರವನ್ನೇ ನೀಡಿದ ಗೃಹ ಸಚಿವ ರಾಚಯ್ಯನವರು ಸಭೆಯ ಅಧಿವೇಶನದಿಂದ ಬಿಡುವು ದೊರೆತ ತಕ್ಷಣವೇ (ವಿಧಾನ ಸಭಾಧಿವೇಶನಗಳಿಗೆ ಶನಿವಾರ ಹಾಗೂ ಭಾನುವಾರ ರಜಾದಿನ) ಮಾರ್ಚ್ ಏಳನೇ ದಿನಾಂಕ ಧರ್ಮಸ್ಥಳಕ್ಕೆ ಧಾವಿಸಿ ಪದ್ಮಲತಾರವರ ಕುಟುಂಬವನ್ನು ಸಂದರ್ಶಿಸಿದರು. ನಂತರ ಧರ್ಮಸ್ಥಳದ ಅತಿಥಿ ಗೃಹದಲ್ಲಿ ವೀರೇಂದ್ರ ಹೆಗ್ಗಡೆಯವರ ದರುಶನವೂ ಆಯಿತೆಂಬುದೂ ಕೂಡ ಗಮನಿಸಬೇಕಾದ ಸಂಗತಿಯೇ. ಈ ಭೇಟಿಗಳೆಲ್ಲ ಮುಗಿದ ಮೇಲೆ ವಿಶೇಷ ತನಿಖೆಗೆ ಆಜ್ಞೆ ಮಾಡಲಾಗಿದೆಯೆಂದು ತಿಳಿಸಿದ್ದಾರೆ.

ಜನತಾ ಸರ್ಕಾರದ ಅಧ್ವರ್ಯು ರಾಮಕೃಷ್ಣ ಹೆಗ್ಗಡೆಯವರೇ ನೆನಪಾದಾಗಲೊಮ್ಮೆ ಹೋಗಿ ಮಣಿದು ಬರುವ ಮತ್ತೊಬ್ಬ ಹೆಗ್ಗಡೆಯವರ ಸನ್ನಿಧಾನದ ಕೃಪಾ ಪ್ರಸಾದ ಇದರಲ್ಲಿ ಧಾರಾಳವಾಗಿರುವಾಗ ಈ ಸರಕಾರದಿಂದ ನಿಷ್ಪಕ್ಷಪಾತ ತನಿಖೆ ಸಾಧ್ಯವೇ ?

ಜನತೆ ಎಚ್ಚರದಿಂದ ಕಣ್ಗಾವಲಿಡಬೇಕು. ಜನತೆಯ ಎಚ್ಚೆತ್ತ ಪ್ರಜ್ಞೆಯೊಂದಲ್ಲದೆ ಬೇರೆ ಮದ್ದಿಲ್ಲ.

ಮನೆಗೆ ಮರಳದ ಉಜಿರೆಯ ತಂಗಿ

ತಾ|| 22-12-1986ರಂದು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಉಜಿರೆಯ ಮಂಜುನಾಥೇಶ್ವರ ಕಾಲೇಜಿನ ವಿದ್ಯಾರ್ಥಿನಿ[II PUC Science]ಹಿಂತಿರುಗಿ ಮನೆಗೆ ಬರಲಿಲ್ಲ.

ಆಕೆಯ ತಂದೆ ಧರ್ಮಸ್ಥಳ ಗ್ರಾಮನಿವಾಸಿ ಪ್ರಾಂತ ರೈತಸಂಘದ ಗ್ರಾಮಘಟಕದ(AIKS)ಅಧ್ಯಕ್ಷರಾದ ಕಾ|ದೇವಾನಂದರು ಅಂದಿನಿಂದಲೇ ಮಗಳಿಗಾಗಿ ಅಲ್ಲಲ್ಲಿ ಸಾಕಷ್ಟು ಹುಡುಕಾಡಿ ಕೊನೆಗೆ 24-12-86ರಂದು ಬೆಳ್ತಂಗಡಿ ಆರಕ್ಷಕ ಠಾಣೆಗೆ ಮಗಳು ಕಾಣೆಯಾದ ಬಗ್ಗೆ ದೂರು ನೀಡಿದರು.

ಮಗಳ ಕಾಣೆಯಿಂದ ನೊಂದು ದೂರು ನೀಡಲು ಹೋದ ತಂದೆಗೆ ಬೆಳ್ತಂಗಡಿ ಠಾಣೆಯ S.I ಯವರಿಂದ "ಯಾಕಯ್ಯ ನಿನ್ನ ಮಗಳನ್ನು ಮದುವೆ ಮಾಡಿಕೊಡಲಿಲ್ಲ ? ನಮಗೆ ತೊಂದರೆ ಕೊಡುತ್ತಿದ್ದಿ ?" ಎಂಬಿತ್ಯಾದಿ ರೀತಿಯ ಸ್ವಾಗತ ದೊರೆಯಿತು. ಮಾತ್ರವಲ್ಲ 24-12ರಂದು ನೀಡಿದ ದೂರನ್ನು ದಾಖಲಿಸದೆ ಈ ದೂರು ಸರಿಯಿಲ್ಲ ಬೇರೆಯೇ ಬರೆದು ನೀಡಬೇಕೆಂದು ಹೇಳಿ 25-12ರಂದು ಪ್ರತ್ಯೇಕ ದೂರು ಬರೆಯಿಸಿ ತೆಗೆದುಕೊಂಡರು. ಇದನ್ನು ದಾಖಲಿಸಿದ್ದು ತಾಲ್ಲೂಕು ರೈತ ಸಂಘದ ಮುಂದಾಳುಗಳು ಸಂಪರ್ಕಿಸಿ ಒತ್ತಾಯಿಸಿದ ನಂತರವೇ (ಈ ರೀತಿ ಪಿ.ಸಿ. 158/86 ನಂತೆ ದಾಖಲಾಗಿದೆ.)

ತಾ. 28-12-86ರಂದು ದೇವಾನಂದ ನೆರೆಯ ಸೋಮನ್ ಎಂಬವರು ಇನ್ನೊಬ್ಬ ನೆರೆಯ ದಿವಾಕರನ್ ಎಂಬವರಲ್ಲಿಗೆ ಮಧ್ಯರಾತ್ರಿ ಬಂದು ದೇವಾನಂದರ ಮಗಳನ್ನು ಯಾರು ಎಲ್ಲಿ ತಪ್ಪಿಸಿಟ್ಟಿರುತ್ತಾರೆಂಬ ವಿಚಾರ ನನಗೆ ಗೊತ್ತು ಆಕೆ ಚಾರ್ಮಾಡಿ ಕಡೆ ಇದ್ದಾಳೆ ಅವಳನ್ನು ಹುಡುಕಲು ನೀವು ದೇವಾನಂದರಿಗೆ ಸಹಾಯ ಮಾಡಲು ಹೋಗಬಾರದು ಹೋದರೆ ತೊಂದರೆಯಿದೆ ಎಂಬುದಾಗಿ ಎಚ್ಚರಿಕೆ ನೀಡಿದರು.

ಈ ಬಗ್ಗೆ ದೇವಾನಂದರು ಪೋಲೀಸರಿಗೆ ಲಿಖಿತ ದೂರು ನೀಡಿ ಗಮನ ಸೆಳೆದರೂ, ಅವರು ಏನನ್ನೂ ಮಾಡಿಲ್ಲ ತೀವ್ರವಾಗಿ ಒತ್ತಾಯಿಸಿದಾಗ ಸೋಮನ್‌ರನ್ನು ಸ್ಟೇಷನಿಗೆ ತಂದು ವಿಚಾರಿಸಲು ಧರ್ಮಸ್ಥಳ ವೀರೇಂದ್ರ ಹೆಗ್ಡೆಯ ವಕ್ತಾರರಾದ ಲಕ್ಕಣ್ಣ ಶೆಟ್ಟಿ, ಗುಣಪಾಲ ಆರಿಗ ಮುಂತಾದವರು ಒಂದು ಜಾಮೀನು ನೀಡಿ ವಿಚಾರಣೆಗೆ ಅವಕಾಶ ನೀಡದೆ ಕರೆದುಕೊಂಡು ಹೋದರು. ಇದನ್ನು ದೇವಾನಂದರು ಆಕ್ಷೇಪಿಸಿದಾಗ ಲಕ್ಕಣ್ಣ ಶೆಟ್ಟಿ ದೇವಾನಂದ ಮತ್ತು ಅವರ ಮಗನಿಗೆ ಹೊಡೆಯಲು ಠಾಣೆಯ ವಠಾರದಲ್ಲೇ ತಯಾರಾದರು. ಈ ರೀತಿ ತನಿಖೆಗೆ ಅಪ್ರತ್ಯಕ್ಷವಾಗಿ ಪ್ರಭಾವೀ ವ್ಯಕ್ತಿಗಳಿಂದ ತಡೆ ಬಂದು ತನಿಖೆ ಸ್ಥಗಿತಗೊಂಡಿತು.

ಇದೇ ವೇಳೆ ಸೋಮನ್ ತಪ್ಪಿಸಿ ಊರು ಬಿಟ್ಟು ಹೋಗಿ ದೇವಾನಂದರು ಅವರನ್ನು ಕಾಣೆ ಮಾಡಿದ್ದಾರೆಂದು ಆತನ ಪತ್ನಿ ಸರೋಜಿನಿಯ ಮೂಲಕ ದೂರು ಕೊಡಿಸಿ ದೇವಾನಂದರ ಮೇಲೆ ಕೇಸು ಮಾಡಿ ತೊಂದರೆ ಕೊಡುವ ಕುತಂತ್ರ ಕೂಡಾ ನಡೆಯಿತು. ಆದರೆ ಈ ಬಗ್ಗೆ ಮನವರಿಕೆಯಾದ ದೇವಾನಂದ ಮತ್ತು ದಿವಾಕರು ಈ ಬಗ್ಗೆ ಪೋಲೀಸರಿಗೆ ದೂರು ನೀಡಿದ ಪರಿಣಾಮವಾಗಿ ಅದು ನಿಂತು ಹೋಯಿತು.

ಈ ಬೆಳವಣಿಗೆಗಳ ಮಧ್ಯೆ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಚುನಾವಣೆಗಳು ನಡೆಯುತ್ತಿದ್ದಾಗ ಧರ್ಮಸ್ಥಳ ಮಂಡಲ ಪಂಚಾಯತಿಗೆ ನಾಮಪತ್ರ ನೀಡಬೇಕಾದ 5-1-87ರಂದು ದೇವಾನಂದರು ಹೋದರು. ದೇವಾನಂದ ವೀರೇಂದ್ರ ಹೆಗ್ಡೆಯವರ ಮಾಜೀ ಗೇಣಿ ಒಕ್ಕಲು ಪಂಚಾಯತ್ ಕಛೇರಿಯಲ್ಲಿ ಗುಣಪಾಲ ಆರಿಗರು ಬಂದು "ಹೆಗ್ಡೆಯವರ ಅನುಮತಿ ಪಡೆಯದೆ ಚುನಾವಣೆಯಲ್ಲಿ ಸ್ಪರ್ಧಿಸಿದರೆ ಮುಂದಕ್ಕೆ ಈ ಊರಲ್ಲಿ ಬದುಕಲು ನಿಮಗೆ ಸಾಧ್ಯವೇ ಯೋಚಿಸು ಎಂಬುದಾಗಿಯೂ, ನೀನು ಚುನಾವಣೆಯಿಂದ ದೂರ ನಿಂತರೆ ಎಲ್ಲಿದ್ದರೂ ನಿನ್ನ ಮಗಳನ್ನು ನಾನು ಹುಡುಕಿ ಕೊಡುತ್ತೇನೆಂದೂ" ಬೆದರಿಕೆ ಹಾಕಿ ಆಮಿಷ ತೋರಿಸಿದರು.

ಧರ್ಮಸ್ಥಳ ಗ್ರಾಮದಲ್ಲಿ ಪಂಚಾಯತಿಗೆ ಈ ವರೆಗೆ ಚುನಾವಣೆಗಳು ನಡೆದಿಲ್ಲ. ಹೆಗ್ಡೆ ಕುಟುಂಬದವರಿಂದ ನೇಮಿಸಲ್ಪಟ್ಟವರಷ್ಟೇ ಆಯ್ಕೆಯಾಗುತ್ತಿದ್ದರು. ಅಧಿಕಾರ ನಡೆಸುತ್ತಿದ್ದರು.

ಧರ್ಮಸ್ಥಳ ಗ್ರಾಮದಲ್ಲಿ ಪಂಚಾಯಿತಿಗೆ ಈವರೆಗೆ ಚುನಾವಣೆಗಳು ನಡೆದಿಲ್ಲ. ಹೆಗ್ಡೆ ಕುಟುಂಬದವರಿಂದ ನೇಮಿಸಲ್ಪಟ್ಟವರಷ್ಟೇ ಆಯ್ಕೆಯಾಗುತ್ತಿದ್ದರು. ಆದರೆ ಈ ಬಾರಿ ಅದು ನಡೆಯದೆ ಚುನಾವಣೆ ನಡೆದೇ ಹೋಯಿತು ಇದಕ್ಕೆ ರೈತ ಸಂಘದ ಅಭ್ಯರ್ಥಿಗಳು ಸ್ಪರ್ಧಿಸಿದುದೇ ಕಾರಣ.

1986 ಎಪ್ರಿಲ್‌ನಲ್ಲಿ ಧರ್ಮಸ್ಥಳ ಗ್ರಾಮದಲ್ಲಿ ಮಲೆಕುಡಿಯರ ಮತ್ತು ವಿರೇಂದ್ರ ಹೆಗ್ಡೆಯವರ ಮಧ್ಯೆ ಭೂವಿವಾದ ಒಂದು ರೈತ ಸಂಘ ಮಧ್ಯೆ ಪ್ರವೇಶಿಸಿ ತೀರ್ಮಾನವಾದಂದಿನಿಂದ ಮೇಲೆ ಹೇಳಿದ ಹೆಗ್ಡೆ ವಕ್ತಾರರಾದ ಗುಣಪಾಲ ಆರಿಗ, ರಾಮಕೃಷ್ಣ ಉಡುಪ [PA of ಹೆಗ್ಡೆ] ಮತ್ತು ಈಶ್ವರಯ್ಯ (ರೆವಿನ್ಯೂ) ಮುಂತಾದವರು ಧರ್ಮಸ್ಥಳದಲ್ಲಿ ರೈತ ಸಂಘ ಮಾಡಬಾರದೆಂದು ತಾಲ್ಲೂಕು ಮುಖಂಡರಿಗೂ ಎಚ್ಚರಿಕೆ ನೀಡಿದ್ದರು. ಅದರೆ ಸಂಘಟನೆ ಬೆಳೆಯಿತು. ಮಂಡಲ ಪಂಚಾಯತಿಯಲ್ಲಿ ರೈತ ಸಂಘದ ಸ್ಪರ್ಧೆ ಹಾಗೂ ಜಿಲ್ಲಾ ಪರಿಷತ್‌ನಲ್ಲಿ C.P.I.[M] ಸ್ಪರ್ಧೆ ಧರ್ಮಸ್ಥಳ ಕ್ಷೇತ್ರದಲ್ಲಿ ನಡೆದುದು ವೀರೇಂದ್ರ ಹೆಗ್ಡೆಯವರಿಗೆ ಮತ್ತು ಅವರ ಚೇಲಾಗಳಿಗೆ ತಡೆಯಲಾರದ ಸಂಕಟ ತಂದಿದೆ. ಇಂತಹ ಪರಿಸ್ಥಿತಿಯಲ್ಲಿ ಈ ಎಲ್ಲಾ ಬೆಳವಣಿಗೆಗಳೂ ದೇವಾನಂದರ ಮಗಳಾದ 17ವರ್ಷದ ವಿದ್ಯಾರ್ಥಿನಿ ಮುಗ್ಧ ಬಾಲಕಿ ಕುಮಾರಿ ಪದ್ಮಲತಾಳ ಮೇಲೆ ಸೇಡು ತೀರಿಸಲು ಕಾರಣವಾಯಿತು. —ಬಿ. ವಿಷ್ಣುಮೂರ್ತಿ

"ರಾಜೀವ್ ಗಾಂಧಿಯುವರು ಅಪದ್ಧ ಮಾತನಾಡಿದಷ್ಟೂ ಒಳ್ಳೆಯದೇ"

ಕೇಂದ್ರ ಸಮಿತಿ ಸದಸ್ಯ ಕಾ|| ಸುನಿಲ್ ಮೈತ್ರಾ ರವರೊಂದಿಗೆ ಒಂದು ಸಂದರ್ಶನ – ಎ. ಎಸ್. ಆಚಾರ್ಯರವರಿಂದ

ಹಿಂದಿನ ವಾರ ಕೇರಳದ ಚುನಾವಣಾ ರಂಗದ ಬಿರುಸಿನ ಬಗ್ಗೆ ಓದಿದ್ದೀರಿ ಈಗ ಪ. ಬಂಗಾಳದ ಚುನಾವಣಾ ರಂಗ ಕಾವೇರಿ ರಾಜೀವ ಗಾಂಧಿಯುವರ ಬಿರುಗಾಳಿ ಪ್ರವಾಸ ಮತ್ತು ಸುಳ್ಳಿನ ಜಡಿಮಳೆ ರಭಸವಾಗಿ ಸಾಗುತ್ತಿರುವಾಗ ಅಲ್ಲಿನ ಸ್ಥಿತಿ ಏನು ಮತ್ತೊಮ್ಮೆ ಓದಿ....

ಕಲ್ಕತ್ತಾಕ್ಕೆ ನಾವು ಇತ್ತೀಚೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಹಜವಾಗಿಯೇ ನಮಗೆಲ್ಲರಿಗೂ ಚುನಾವಣಾ ಪ್ರಚಾರ ಹೇಗೆ ನಡೆಯುತ್ತಿದೆ, ಮತದಾರರ ಅಭಿಪ್ರಾಯಗಳೇನು ಮತ್ತು ಚನಾವಣಾ ಫಲಿತಾಂಶ ಏನಾಗಬಹುದು ಎನ್ನುವುದನ್ನು ತಿಳಿಯುವ ಕುತೂಹಲ. ಪ.ಬಂಗಾಳ ರಾಜ್ಯದೊಳಗೆ ಪ್ರವೇಶಿಸುತ್ತಿದ್ದಂತೆ ನಮಗೆ ಕಂಡು ಬಂದ ಆಹ್ಲಾದಕರವಾದ ದೃಶ್ಯವೆಂದರೆ ಕಣ್ಣು ಹಾಯಿಸುವಷ್ಟು ದೂರಕ್ಕೂ ಬೆಳೆದು ನಿಂತ ಹಚ್ಚ ಹಸಿರು ಪೈರು, ಭತ್ತದ ಗದ್ದೆಗಳು, ನೀರು ತುಂಬಿದ ಕೊಳ ಮತ್ತು ಕಾಲುವೆಗಳು ಮತ್ತು ಗಾಳಿಗೆ ತಲೆದೂಗುತ್ತಿದ್ದ ತೆಂಗಿನ ಮರಗಳ ಸಾಲು ಸಾಲು. ಪ.ಬಂಗಾಳದ ಈ ಪ್ರದೇಶ ಹೆಚ್ಚುಕಡಿಮೆ ಕೇರಳ ಹಾಗೂ ಕರ್ನಾಟಕದ ಕರಾವಳಿ ಪ್ರದೇಶವನ್ನೇ ಹೋಲುತ್ತದೆ. ಎರಡೂ ಬದಿಯಲ್ಲಿನ ಎಲ್ಲ ಗೋಡೆಗಳ ಮೇಲೂ ರಂಗೋಲಿ ಬರೆದಂತೆ ಸಿ ಪಿ.ಐ. [ಎಂ] ಮತ್ತು ಎಡರಂಗದ ವರ್ಣರಂಜಿತ ಗೋಡೆ ಬರಹಗಳು ಕಾಣಿಸುತ್ತವೆ.

ಕಲ್ಕತ್ತಾದಲ್ಲಿ ನಾವಿದ್ದ ನಾಲ್ಕು ದಿನಗಳಲ್ಲಿ ಹಲವು ಜನರ ಅಭಿಪ್ರಾಯಗಳನ್ನು ಕೇಳುವ ಅವಕಾಶ ದೊರೆಯಿತು. ಕಳೆದ ಲೋಕ ಸಭೆಯಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ಸಚೇತಕರೂ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಮಾಜಿ ಅಧ್ಯಕ್ಷರೂ ಆಗಿರುವ ಕಾ. ಸುನಿಲ್ ಮೈತ್ರ ಇವರಲ್ಲಿ ಪ್ರಮುಖರು. ಕಾ. ಸುನೀಲ್ ಮೈತ್ರ ಈಗ ಸಿ.ಪಿ.ಐ. (ಎಂ) ನ ಕೇಂದ್ರ ಸಮಿತಿಯ ಸದಸ್ಯರಾಗಿದ್ದಾರೆ ಮತ್ತು ಸದ್ಯಕ್ಕೆ ಕಲ್ಕತ್ತಾ ನಗರದಲ್ಲಿ ಚುನಾವಣಾ ಪ್ರಚಾರದ ಮೇಲುಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. ಅವರೊಂದಿಗೆ ನಾವು ನಡೆಸಿದ ಸಂದರ್ಶನ ಇದು.

ಪ್ರಶ್ನೆ. ಪ್ರಧಾನಿ ರಾಜೀವಗಾಂಧಿ ಬಂಗಾಳಕ್ಕೆ ಬಂದಾಗಲೆಲ್ಲಾ ಎಡರಂಗ ಸರ್ಕಾರದ ಬಗ್ಗೆ ಏನೇನೋ ಆರೋಪ ಹೊರಿಸುತ್ತಾರಲ್ಲ!

ಮೈತ್ರ. ಪ್ರಧಾನಿ ರಾಜೀವಗಾಂಧಿ ಪ.ಬಂಗಾಳಕ್ಕೆ ಬಂದು ಬಾಯಿಗೆ ಬಂದ ಹಾಗೆ ಮಾತಾಡಿದಷ್ಟು ನಮಗೆ ಒಳ್ಳೆಯದು, ಆತ ಹೇಳುವ ಪ್ರತಿಯೊಂದು ಮಾತೂ ಸುಳ್ಳು ಮತ್ತು ಪರಸ್ಪರ ವಿರೋಧವಾದುದೆಂದು ಜನ ತಿಳಿದುಕೊಳ್ಳುತ್ತಿದ್ದಾರೆ. ಈ ದೃಷ್ಟಿಯಲ್ಲಿ ರಾಜೀವ ಗಾಂಧಿ ನಮ್ಮ ರಾಜ್ಯಕ್ಕೆ ಇನ್ನಷ್ಟು ಬರಲಿ ಮತ್ತು ತನಗೆ ತೋಚಿದಂತೆ ಮಾತಾಡಲಿ ಎಂದು ನಾವು ಬಯಸುತ್ತೇವೆ. ಅವರು ಬಂದಷ್ಟು ಹೆಚ್ಚು ಜನ ಎಡರಂಗದ ಕಡೆ ಒಲವು ತೋರಿಸುತ್ತಾರೆ. ರಾಜೀವ್ ಗಾಂಧಿ ಆಡಿದ ಮಾತೆಲ್ಲ ಕಾಂಗ್ರೆಸ್ (ಐ) ಗೆ ಮುಳುವಾಗುತ್ತಿದೆ. ಉದಾಹರಣೆಗೆ ರಾಜೀವಗಾಂಧಿ ಬಂಗಾಳಕ್ಕೆ 684 ಕೋಟಿ ರೂಪಾಯಿ ನೀಡಿದ್ದನೆಂದು ಸಾರಿದರು. ಆಮೇಲೆ ಅದನ್ನು 100 ಕೋಟಿ ರೂಪಾಯಿ ಏರಿಸಿದ್ದೇನೆಂದೂ ಹೇಳಿದರು. ಇದರಲ್ಲಿ 400 ಕೋಟಿ ರೂ. ಗಳನ್ನು ಕಲ್ಕತ್ತಾ ಇಲೆಕ್ಟ್ರಿಕ್ ಕಾರ್ಪೋರೇಷನ್‌ಗೆ ಕೊಡ ಮಾಡಲಾಗಿತ್ತು. ಈ ಸಂಸ್ಥೆ ಪ.ಬಂಗಾಳದ ಸರ್ಕಾರೀ ಒಡೆತನದ ಸಂಸ್ಥೆ ಅಲ್ಲ. ಜನ ಇದನ್ನು ತಿಳಿದಿದ್ದಾರೆ. "ಆದರೂ ಇಂತಹ ವಾಸ್ತವ ಸಂಗತಿಗಳನ್ನು ಜನತೆಗೆ ತಿಳಿಸಲು ನಾವು 10 ಲಕ್ಷ ಕರಪತ್ರಗಳನ್ನು ಬಂಗಾಳಿಯಲ್ಲಿ ಮುದ್ರಿಸಿ ಜನತೆಗೆ ಹಂಚಿದ್ದೇವೆ. ಇತ್ತೀಚಿನ ರೈಲ್ವೇ ಮುಂಗಡ ಪತ್ರದಲಿ ದೀಗಾ–ತಾಮ್ಲುಕ್ ರೈಲ್ವೆಗೆ ಮೂರು ಕೋಟಿ ರೂಪಾಯಿ ವೆಚ್ಚವಾಗಬಹುದೆಂದೂ ಅವಕ್ಕೆ ಐದು ಕೋಟಿ ರೂಪಾಯಿಯನ್ನು ವ್ಯಯಿಸಲಾಗುವುದೆಂದೂ ಹೇಳಲಾಗಿದೆ.ಆದರೆ ಈ ಯೋಜನೆ ಕಾರ್ಯಗತವಾಗಲು ರೂ. 40 ಕೋಟಿ ಬೇಕಾಗುತ್ತದೆ. ಇದನ್ನು ನಮ್ಮ ಜನ ಅರ್ಥ ಮಾಡಿಕೊಂಡಿದ್ದಾರೆ.

ಪ್ರಶ್ನೆ. ನಿಮ್ಮ ಚುನಾವಣಾ ಪ್ರಚಾರ ಹೇಗೆ ನಡೆಯುತ್ತಿದೆ. ?

ಮೈತ್ರಾ. ಚುನಾವಣಾ ಪ್ರಚಾರದಲ್ಲಿ ತೊಡಗಿರುವ ಸಂಗಾತಿಗಳ ಸಂಖ್ಯೆ ಹಲವಾರು ಲಕ್ಷಕ್ಕೂ ಮೀರಿದೆ. (ನಾವು ಭೇಟಿ ಮಾಡಿದ ಎಲ್ಲಾ ನೌಕರರೂ ಪಿಯರ್‌ಲೆಸ್ ಕಂಪೆನಿಯ ನೌಕರರೂ ತಾವು ಚುನಾವಣಾ ಪ್ರಚಾರದಲ್ಲಿ ತೊಡಗಿರುವುದಾಗಿ ತಿಳಿಸಿದರು) ಪ್ರತಿ ದಿನ ಸುಮಾರು 100 ರಿಂದ 120 ರಷ್ಟು ಸಭೆಗಳನ್ನು ನಡೆಸಲಾಗುತ್ತಿದೆ. ಮತದಾರರ ಮನೆಗಳಿಗೆ ಈಗಾಗಲೇ ಮೂರು ಬಾರಿ ಸಂದರ್ಶನ ನೀಡಲಾಗಿದೆ. ವರ್ಗವಾಗಿ ಹೋದ ಮೃತರಾದ ಅಥವಾ ಹೊಸದಾಗಿ ಮೊಹಲ್ಲಾಗಳಿಗೆ ಬಂದಿರುವ ಮತದಾರರನ್ನು ಗುರುತಿಸಲಾಗಿದೆ.

ಪ್ರಶ್ನೆ. ಜಿ. ಎನ್.ಎಲ್.ಎಫ್. ಚಳುವಳಿಯ ಬಗ್ಗೆ ನೀವೇನೆನ್ನುತ್ತೀರಿ ?

ಮೈತ್ರಾ. ಪ. ಬಂಗಾಳವನ್ನು ಮತ್ತೊಮ್ಮೆ ವಿಭಜಿಸುವುದಿಲ್ಲವೆಂಬ ರಾಜೀವಗಾಂಧಿಯವರ ಮಾತನ್ನು ನಾವು ಸುತರಾಂ ನಂಬುವುದಿಲ್ಲ. ನಾವಿನ್ನೂ ಎಚ್ಚರದಿಂದ ಕಾದುಕೊಂಡಿದ್ದೇವೆ ಈಗ ಘೈಶಿಂಗ್ ದೆಹಲಿಲ್ಲಿದ್ದಾನೆ. ಯಾಕೆ ? ಕೇಂದ್ರ ಸರ್ಕಾರ ಮತ್ತು ಘೈಶಿಂಗ್ ನಡುವೆ ಏನೋ ಅಪವಿತ್ರ ಸಂಧಾನ ನಡೆಯುತ್ತಿದೆ.

ಗೂರ್ಖಾಲ್ಯಾಂಡ್ ಚಳುವಳೀನ ನಾವು ಛಲದಿಂದ ಎದುರಿಸುತ್ತಿದ್ದೇವೆ. ನಮ್ಮ ಪಕ್ಷದ 29 ಮಂದಿ ಸಂಗಾತಿಗಳು ಈ ಹೋರಾಟದಲ್ಲಿ ಸತ್ತಿದ್ದಾರೆ. ಈ ಎಲ್ಲಾ 29 ಮಂದಿಯೂ ನೇಪಾಳಿ ಭಾಷೆ ಆಡುವವರು.

ಪ್ರಶ್ನೆ ಅಂದರೆ ಗೂರ್ಖಾಗಳೇ ?

ಮೈತ್ರಾ ನೇಪಾಳಿ ಭಾಷೆ ಮಾತಾಡುವವರು ಮತ್ತು ನೇಪಾಳದಿಂದ ಬಂದವರೆಲ್ಲರೂ ಗೂರ್ಖಾಗಳೇ ಅಲ್ಲ.

ಈ ನೇಪಾಳಿಗಳಲ್ಲಿ 7 ಜನ ಸಂಗಾತಿಗಳನ್ನು ಕದ್ದೊಯ್ಯಲಾಗಿದೆ. ಸುಮಾರು 6000 ಜನ ಮನೆ ಕಳೆದುಕೊಂಡಿದ್ದಾರೆ ನೇಪಾಳ ಮಾತಾಡುವ ಜನ ಏನೆಂದಿದ್ದಾರೆ ಗೊತ್ತೆ ? ಪ ಬಂಗಾಳ ನಮ್ಮ ರಾಜ್ಯ ಅಂತ ಗೋರ್ಖಾಲ್ಯಾಂಡ್ ಚಳುವಳಿಯಲ್ಲಿ ಅತ್ಯಂತ ಹೆಚ್ಚು ಬಲಿದಾನ ಮಾಡಿದವರು ನೇಪಾಳಿ ಜನ. ಇದನ್ನು ನಿಮ್ಮ ಪತ್ರಿಕೆಯಲ್ಲಿ ಸ್ಪಷ್ಟವಾಗಿ ಬರೆಯಿರಿ.

ಪ್ರಶ್ನೆ. ವಿದ್ಯುತ್ ಸರಬರಾಜಿನ ಕುರಿತು....

ಮೈತ್ರಾ. ಪ ಬಂಗಾಳವು ವಿದ್ಯುತ್ ಕೊರತೆಯನ್ನು ನಿವಾರಿಸಿದೆ. ಕೆಲವು ವರ್ಷಗಳ ಹಿಂದೆ ನಾವು ಮನೆಗಳ ವಿದ್ಯುತ್ ಸರಬರಾಜನ್ನು ಕಡಿತ ಮಾಡಬೇಕಾಯಿತು. ನಮ್ಮ ಜನಪ್ರಿಯತೆ ಇದರಿಂದಾಗಿ ಕುಂಟಿತು. ಆದರೂ ನಾವು ಧೃತಿಗೆಡಲಿಲ್ಲ. ನಮ್ಮ ಪಾಲಿಗೆ ಕೈಗಾರಿಕೆಗಳಿಗೆ ವಿದ್ಯುತ್ ನೀಡುವುದು ತೀರಾ ಅಗತ್ಯವಾಗಿತ್ತು, ನಮ್ಮ ಅತ್ಯಂತ ಕೆಟ್ಟ ದಿನಗಳಲ್ಲೂ ನಾವು ಕೈಗಾರಿಕೆಗಳಿಗೆ ವಿದ್ಯುತ್ತನ್ನು ಅಲ್ಲಗಳೆಯಲಿಲ್ಲ. ಈಗ ಪರಿಸ್ಥಿತಿ ಸುಧಾರಿಸಿದೆ. ಒಂದು ನಿಮಿಷವೂ ವಿದ್ಯುತ್ ಸರಬರಾಜು ನಿಲ್ಲುವುದಿಲ್ಲ.

ಕಳೆದ 27 ವರ್ಷಗಳ ಕಾಂಗ್ರೆಸ್ ಆಡಳಿತೆಯಲ್ಲಿ ಉತ್ಪಾದನೆಯಾಗುತ್ತಿರುವ ವಿದ್ಯುತ್ತು ಕೇವಲ 90 ಮಿಲಿಯ ಮೆಗಾವಾಟ್ ಮಾತ್ರ. ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಇದು 120ಮಿ. ಮೆಗಾವಾಟ್‌ಗೆ ಏರಿದೆ ಈಗ ವಿದ್ಯುತ್ ಸರಬರಾಜು ಅವ್ಯಾಹತವಾಗಿದೆ. ಬಂಗಾಳದಲ್ಲಿ ಈಗ ವಿದ್ಯುತ್ ಕಡಿತ ಇಲ್ಲ.

ನಮ್ಮ ಕಲ್ಕತ್ತಾ ಸಂದರ್ಶನದ ವೇಳೆ ಒಬ್ಬ ವ್ಯಾಪಾರಿ, ವಿದೇಶಿ ಉದ್ಯಮವೊಂದರ ನೌಕರ ಮತ್ತು ಒಬ್ಬ ಟ್ಯಾಕ್ಸಿ ಡ್ರೈವರ್‌ನನ್ನು ಕೂಡಾ ವಿಧಾನ ಸಭಾ ಚುನಾವಣೆಗಳ ಬಗ್ಗೆ ಪ್ರಶ್ನಿಸಿದೆವು. ಎಲ್ಲರಿಂದಲೂ ದೊರೆತ ಉತ್ತರ ಒಂದೇ. ಬಂಗಾಳದಲ್ಲಿ ಏನೂ ಗಲಾಟೆ ಇಲ್ಲ. ಸಿ.ಪಿ.ಐ. (ಎಂ) ಒಳ್ಳೆ ಕೆಲಸ ಮಾಡಿದೆ. ಈ ಪಕ್ಷದಲ್ಲಿ ಪಕ್ಷಾಂತರ ಪ್ರವೃತ್ತಿ ಇಲ್ಲ. ಹಾಗಾಗಿ ಈ ಬಾರಿಯೂ ಸಿ.ಪಿ.ಐ. (ಎಂ) ಜಯಭೇರಿ ಹೊಡೆಯುತ್ತದೆ. ನಮ್ಮನ್ನು ಚಿತ್ತರಂಜನ್ ಅವೆನ್ಯೂನಿಂದ ಹೂಗ್ಲಿನದಿಯ ದಡದವರೆಗೆ ಟ್ಯಾಕ್ಸಿಯಲ್ಲಿ ಕೊಂಡೊಯ್ದ ಡ್ರೈವರ್ ಹೇಳಿದಂತೆ 'ಇಸ್ ಬಾರ್‌ಭೀ ಪಶ್ಚಿಮ' ಬಂಗಾಲ್ ಸಿ. ಪಿ ಎಂ.ಹಿಮೇ ಜೊತೇಗಾ'

ಪ್ರಶ್ನೆ. ಸೀಟುಗಳ ಹಂಚಿಕೆಯ ವಿಚಾರದಲ್ಲಿ ಎಡರಂಗದಲ್ಲಿ ಭಿನ್ನಾಭಿಪ್ರಾಯ ಅಥವಾ ಅಸಮಾಧಾನ ಇದೆಯೇ ?

ಮೈತ್ರಾ. ಯಾವುದೇ ಬಗೆಯ ಅಸಮಾಧಾನ ಇಲ್ಲ. ನಾವೆಲ್ಲಾ ತೀರಾ ಐಕಮತ್ಯದಿಂದ ಇದ್ದೇವೆ.

ಪ್ರಶ್ನೆ. ವಿಧಾನಸಭಾ ಚುನಾವಣೆಗಳಲ್ಲಿ ಎಡರಂಗ ಗೆದ್ದು ಬರುವ ಸಾಧ್ಯತೆ ಏನು ?

ಮೈತ್ರಾ. ನಾವು ಗೆದ್ದು ಬರುವ ಸಾಧ್ಯತೆಗಳು ಉಜ್ವಲವಾಗಿವೆ. 1972 ರಲ್ಲಿ ನಡೆದಂತೆ ತೀರಾ ಅನಿರೀಕ್ಷಿತವಾದ ಅನಾಹುತ ಏನಾದರೂ ನಡೆಯದಿದ್ದಲ್ಲಿ, ನಾವು ಬಹುಮತದಿಂದ ಗೆದ್ದು ಬರುವುದು ಖಂಡಿತ. ಎಡರಂಗಕ್ಕೆ 1982 ರಲ್ಲಿ ಲಭಿಸಿದಷ್ಟು ಮತ್ತು ಸಿ.ಪಿ.ಐ. (ಎಂ) ಗೆ ಕೂಡಾ 1982ರಲ್ಲಿ ದೊರೆತಷ್ಟು ಸ್ಥಾನ ಈ ಬಾರಿಯೂ ದೊರೆಯುವುದು ಖಚಿತ.

ಚುನಾವಣೆ ಗೆಲ್ಲಲು ಎರಡು ಕಾಂಗ್ರೆ ಸೂತ್ರಗಳು

ಪಶ್ಚಿಮ ಬಂಗಾಳ ಪ್ರದೇಶ ಕಾಂಗ್ರೆಸ್ [ಐ] ಸಮಿತಿ ಅಧ್ಯಕ್ಷರ ಪ್ರಕಾರ ಅವರ ಪಕ್ಷ ಪಶ್ಚಿಮಬಂಗಾಳದ ವಿಧಾನಸಭಾಚುನಾವಣೆಗಳಲ್ಲಿ ಖಂಡಿತಾ ಗೆಲ್ಲುತ್ತದೆ. ಆದರೆ ಕೇವಲ ಎರಡು ಶರತ್ತುಗಳಿವೆ–

(1) ಮತಪತ್ರಗಳ ಮುದ್ರಣದಿಂದಲೇ ಆರಂಭಿಸಿ, ಮತಪೆಟ್ಟಿಗೆಗಳ ಕಾವಲು ಮುಂತಾದ ಎಲ್ಲಾ ಹಂತಗಳಲ್ಲೂ ಚುನಾವಣೆ ಕೇಂದ್ರ ಮೀಸಲು ಪಡೆಯ ಉಸ್ತುವಾರಿಯಲ್ಲಿ ನಡೆಯಬೇಕು.

(2) ಮತಗಟ್ಟೆಗಳ ಜವಾಬ್ದಾರಿ ಸರ್ಕಾರಿ ನೌಕರರ ಸಂಯೋಜಕ ಸಮಿತಿಯ ಸದಸ್ಯರು ಮಾತ್ರವೇ ಅಲ್ಲ, ಕಾಂಗ್ರೆಸ್ [ಐ] ಹಿಡಿತದಲ್ಲಿರುವ ಸರ್ಕಾರಿ ನೌಕರರ ಫೆಡರೇಶನ್‌ಗಿರಬೇಕು.

ಪ್ರಿಯರಂಜನ ದಾಸಮುನಿಶಿಯವರೇ, ನಿಮ್ಮ ಪಕ್ಷದ ಯೋಜನೆ ತಿಳಿಸಿದ್ದಕ್ಕಾಗಿ ಧನ್ಯವಾದಗಳು. ಯಾಕೆಂದರೆ ನಿಮ್ಮ ಪಕ್ಷಕ್ಕೆ ಪಶ್ಚಿಮ ಬಂಗಾಳ ರಾಷ್ಟ್ರೀಯ ರಾಜಕಾರಣದ ಪ್ರಯೋಗ ತಾಣ ತಾನೇ ! ಆದರೆ ನಿಮಗೊಂದು ಪ್ರಶ್ನೆ– ಕೇಂದ್ರ ವಾಣಿಜ್ಯರ ಮಂತ್ರಿಯಾಗಿ ಬೇರೆ ದೇಶಗಳೊಂದಿಗೆ ನಮ್ಮ ವ್ಯಾಪಾರ ಸುಗಮಗೊಳಿಸಲು ಇದೇ ಶರತ್ತು ಹಾಕುತ್ತೀರಾ ?

ಕಾನೂನು - ವ್ಯವಸ್ಥೆ ಸುಧಾರಿಸುವವರು !

ಪ್ರಧಾನ ಮಂತ್ರಿಗಳ ಪ್ರಕಾರ ಪ. ಬಂಗಾಳದಲ್ಲಿನ ಕಾನೂನು ವ್ಯವಸ್ಥೆ ಸ್ಥಿತಿ ಪಂಜಾಬಿಗಿಂತಲೂ ಕೆಟ್ಟವೆ ಎಂಬುದು ನಿಮಗೆ ಗೊತ್ತಿದೆ. ಫೆಬ್ರವರಿ 6 ರಂದು ದೊಂಬಿಯಿಂದ ರಕ್ಷಣೆ ಕೋರಿ ಕಲ್ಕತ್ತೆಯಲ್ಲಿರುವ ಪ್ರದೇಶ ಕಾಂಗ್ರೆಸ್ [ಐ] ಮುಖ್ಯ ಕಛೇರಿಯಿಂದ ಪೋಲೀಸ್ ಠಾಣೆಗೆ ತುರ್ತು ಕರೆ ಬಂತು. ಪ್ರಧಾನ ಮಂತ್ರಿಗಳ ಹೇಳಿಕೆ ಎಷ್ಟೊಂದು ನಿಜ ಎಂದು ನಿಮಗನಿಸಿರಬೇಕಲ್ಲವೇ ? ಇಲ್ಲ. ಈ ಬಾರಿ ಕಾಂಗ್ರೆಸ್ [ಐ] ನವರು ಕೂಡಾ ಹಾಗೆಂದು ಬೊಬ್ಬೆ ಹಾಕಲಿಲ್ಲ. ವಿಧಾನ ಸಭಾ ಚುನಾವಣೆಗೆ ಕಾಂಗ್ರೆಸ್ [ಐ] ಟಿಕೆಟ್ ಪಡೆಯುವ ತರಾತುರಿ ಅಷ್ಟೊಂದು. ಪ್ರದೇಶ ಕಾಂಗ್ರೆಸ್ [ಐ] ನ ಸದ್ಯದ ಸೂಬೇದಾರರಾಗಿರುವ ದಾಸಮುನಿಶಿ ತಮ್ಮ ಗುಂಪಿನವರಿಗೇ ಟಿಕೇಟು ಕೊಡಿಸುವುದರ ವಿರುದ್ಧ ತೀವ್ರ ಎಚ್ಚರಿಕೆ ನೀಡಲು ಇತ್ತೀಚೆಗಷ್ಟೇ ಪ್ರಧಾನ ಕಾರ್ಯದರ್ಶಿ ಹುದ್ದೆ ಬಿಟ್ಟು ಸುಬ್ರತೋ ಮುಖರ್ಜಿಯವರ ಬೆಂಬಲಿಗ ವಿದ್ಯಾರ್ಥಿ ಹಾಗೂ ಯುವ ಕಾಂಗ್ರೆಸ್ಸಿಗರು ದಾಸಮುನಿಶಿ ಬೆಂಬಲಿಗರ ಹತೋಟಿಯಲ್ಲಿದ್ದ ಪಕ್ಷದ ಕಛೇರಿಯನ್ನು ಘೇರಾಯಿಸಿ ಬೆದರಿಸಲಾರಂಭಿಸಿದರು. ದಾಸಮುನಿಶಿ ಬೆಂಬಲಿಗರು ಓಡಿಹೋಗಬೇಕಾಗಿ ಬಂತು. ಆದಿನ ಮತ್ತು ರಾತ್ರಿಯಾವ ವರಿಷ್ಠ ಕಾಂಗ್ರೆಸ್‌ಮುಖಂಡರೂ ಅತ್ತ ತಲೆಹಾಕಲಿಲ್ಲ. ಪೋಲೀಸರೇ ಬಹಳ ಹೊತ್ತು ಕಾಂಗ್ರೆಸ್ [ಐ] ಕಛೇರಿಯನ್ನು ನೋಡಿಕೊಂಡರು ! ಮತ್ತೆ ಇದು ಚುನಾವಣಾ–ಪೂರ್ವ ಕಾಂಗ್ರೆಸ್ [ಐ] ನ ಆಂತರಿಕ ದೊಂಬಿಗಳ ಕೇವಲ ಒಂದು ಉದಾಹರಣೆಯಷ್ಟೆ !

"ಇಸ್ ಬಾರ್ ಭೀ ಪಶ್ಚಿಮ್ ಬಂಗಾ ಮೆ ಸಿ. ಪಿ. ಐ. (ಎಂ) ಹೀ ಜೀತೇಗಾ"

—ಒಬ್ಬ ಟ್ಯಾಕ್ಸಿ ಡ್ರೈವರ್

ಇದು ರಾಜ್ಯವೊಂದರ ಚುನಾವಣೆಯೋ ಇಡೀ ದೇಶದ್ದೋ ಎಂದು ಬೆರಗು ಮೂಡುವಂತೆ ಪ. ಬಂಗಾಳದ ಹಳ್ಳಿ ಹಳ್ಳಿಯಲ್ಲೂ

ದೇಶದ ಐಕ್ಯತೆಯ ಬಗ್ಗೆ ವ್ಯಕ್ತವಾಗುತ್ತಿರುವ ಕಾಳಜಿ

ಪಶ್ಚಿಮ ಬಂಗಾಳದಲ್ಲಿ ಮಾರ್ಚ್ 23ರಂದು ನಡೆಯಲಿರುವ ಚುನಾವಣೆಗಳ ಕಣದಲ್ಲಿ ಇತರ ಗುಂಪುಗಳಿದ್ದರೂ ಮುಖ್ಯ ಸ್ಪರ್ಧೆ ಸಿ.ಪಿ.ಐ. [ಎಂ] ಮುಂದಾಳತ್ವದ ಎಡರಂಗ ಹಾಗೂ ಕಾಂಗ್ರೆಸ್ [ಐ] ನಡುವೆ ಎಂದು ಎಲ್ಲರಿಗೂ ತಿಳಿದಿದೆ. ಸಿ.ಪಿ.ಐ. [ಎಂ] ಮಟ್ಟಿಗೆ ಇದು ಎರಡು ಭಿನ್ನ ಧೋರಣೆಗಳ, ಎರಡು ಭಿನ್ನ ಕಾರ್ಯಕ್ರಮಗಳ ನಡುವಿನ ಮಹತ್ವಪೂರ್ಣ ಸಮರ. ಬೂರ್ಜ್ವಾ ಪತ್ರಿಕೆಗಳು ಈ ಅಂಶವನ್ನು ಅಲಕ್ಷಿಸಲು ಯತ್ನಿಸುತ್ತಿದೆ.

ಸಾಮ್ರಾಜ್ಯಶಾಹೀಗಳ ಕುತಂತ್ರಗಳ ಬಗ್ಗೆ, ದೇಶದ ಏಕತೆಯ ಬಗ್ಗೆ, ಧಾರ್ಮಿಕ, ಮತೀಯ, ಜಾತೀವಾದಿಗಳ ಬೆಳವಣಿಗೆಗಳ ಬಗ್ಗೆ, ವಿಛಿದ್ರಕಾರಿ ಶಕ್ತಿಗಳ ಬಗ್ಗೆ, ಇವುಗಳ ವಿರುದ್ಧ ಹೋರಾಟ ನಡೆಸುವುದರ ಬಗ್ಗೆ ಹಿಂದೆಂದೂ ಕಾಣದಷ್ಟು ಸಾಮಾಜಿಕ ಕಳಕಳಿ ಆ ರಾಜ್ಯದಲ್ಲಿಂದು ಕಂಡುಬರುತ್ತಿದೆ.

ಎಡರಂಗದ ಪ್ರಣಾಳಿಕೆ ಮೊದಲ ಪರಿಚ್ಛೇದನೇ ಈ ವಿಷಯದಲ್ಲಿ ಕಾಂಗ್ರೆಸ್[ಐ]ಗೂ ಎಡರಂಗಕ್ಕೂ ಇರುವ ವ್ಯತ್ಯಾಸವನ್ನು ಸ್ಪಷ್ಟವಾಗಿ ಹೇಳಿದೆ. ಎಡರಂಗದ ಪ್ರಚಾರ ಕಾರ್ಯದಲ್ಲೂ ಈ ಕಳಕಳಿ ಎದ್ದು ಕಾಣುತ್ತಿದೆ. ಪ. ಬಂಗಾಳದ ಯಾವ ಭಾಗವನ್ನೇ ನೋಡಲಿ ಪಂಜಾಬ್, ಗೋರ್ಖಾಲ್ಯಾಂಡ್, ತ್ರಿಪುರ, ಶ್ರೀಲಂಕಾದ ಬಗ್ಗೆ ಹಾಕಿದ ಪೋಸ್ಟರುಗಳನ್ನು ಕಾಣಬಹುದು. ಜನರಿಗೆ ಇದೊಂದು ರಾಜಕೀಯ ವಿದ್ಯಾಭ್ಯಾಸ. ಈ ಪತ್ರಕರ್ತನಿಗೆ ಪ. ಬಂಗಾಳದಲ್ಲಿ ಸಂಚರಿಸುತ್ತಿರುವಾಗ, 24-ಪರಗಣ ಜಿಲ್ಲೆಯ ಪಟ್ಟಣ ಪ್ರದೇಶವೆಂದೂ ಪರಿಗಣಿಸಲಾಗದ ಜಗದ್ದಲ್ ಎಂಬ ಕ್ಷೇತ್ರದಲ್ಲಿ, ಕರ್ನಾಟಕದ ಬೆಳಗಾವಿ ಬಗ್ಗೆ ಬರೆದ ಪೋಸ್ಟರು ಕೂಡಾ ಕಂಡುಬಂತು! ಬೆಳಗಾವಿ ಗಲಾಟೆಯಲ್ಲಿ ಕಾಂಗ್ರೆಸ್ [ಐ] ಯಾವ ರೀತಿಯ ಸಂದರ್ಭಸಾಧಕತನದ ನೀತಿಯನ್ನು ಅನುಸರಿಸಿತ, ದೇಶದ ಹಿತವನ್ನು ಬಲಿಕೊಟ್ಟು ತನ್ನ ಪಕ್ಷದ ಲಾಭಕ್ಕಾಗಿ ಸಂಕುಚಿತ ಭಾವನೆಯನ್ನು ಬೆಳೆಸಿತು ಎಂದು ಆ ಪೋಸ್ಟರಿನಲ್ಲಿ ಬರೆಯಲಾಗಿತ್ತು. ಗೋರ್ಖಾಲ್ಯಾಂಡ್ ಸಮಸ್ಯೆ ಇಡೀ ಪ. ಬಂಗಾಳದ ಜನತೆಗೇ ತಿಳಿದಿರುವಂತಹ ಸಮಸ್ಯೆ. ಪ.ಬಂಗಾಳದ ಕಾಂಗ್ರೆಸ್[ಐ]ನ ರಾಜ್ಯ ಮುಖಂಡತ್ವ ಎಲ್ಲಾ ರಾಜಕೀಯ ಪಕ್ಷಗಳೊಡನೆ ಸೇರಿ, ಗೋರ್ಖಾಲ್ಯಾಂಡ್ ಆಂದೋಲನ ದೇಶ-ವಿರೋಧಿಗಳ ವಿಛಿದ್ರಕಾರೀಗಳ ಕೆಲಸ ಎಂದು ಖಂಡಿಸುವಾಗ, ಪ್ರಧಾನ ಮಂತ್ರಿ ರಾಜೀವ ಗಾಂಧಿಯವರು ಮಾತ್ರ ಅದರಲ್ಲಿ ಯಾವ ದೋಷವನ್ನೂ ನೋಡದೇ ಹೋದರು. ಇದರಿಂದ ಆ ರಾಜ್ಯದ ಕಾಂಗ್ರೆಸ್[ಐ]ಗೆ ಮುಜುಗುರವಾಗುವುದು ಮಾತ್ರವಲ್ಲವೇ, ಅವರು ತಮ್ಮ ಪಕ್ಷದ ನೀತಿಯನ್ನು ತಮ್ಮ ಮುಖಂಡ (ರಾಜೀವ ಗಾಂಧಿ)ನ ಪ್ರೀತ್ಯರ್ಥ ಬದಲಾಯಿಸಿಕೊಳ್ಳಬೇಕಾಯಿತು.

ಗೋರ್ಖಾಲ್ಯಾಂಡ್ ಪ್ರಶ್ನೆ ಕಾಂಗ್ರೆಸ್[ಐ]ಪಕ್ಷದ ದಿವಾಳಿಕೋರತನವನ್ನು ಚೆನ್ನಾಗಿ ಬಹಿರಂಗ ಪಡಿಸಿದೆ. ಈ ಚಳುವಳಿಯ ಹಿಂದಿರುವ ಅಪಾಯವನ್ನು ನೋಡದ ಇವರು, ಗುಡ್ಡಗಾಡು ಪ್ರದೇಶಗಳ, ಹಿತಾಸಕ್ತಿಗಳನ್ನು ಕಾಪಾಡಲಿಲ್ಲ ಎಂದು ಎಡರಂಗ ಸರಕಾರವನ್ನು ದೂಷಿಸುತ್ತಾರೆ, ಇದರೊಂದಿಗೆ ಪ.ಬಂಗಾಳದ ಚೌಕಟ್ಟಿನಲ್ಲೇ, ಡಾರ್ಜಿಲಿಂಗಿನ ಗುಡ್ಡಗಾಡುಗಳಿಗೆ ಸ್ವಾಯತ್ತೆ ಕೊಡುವುದನ್ನು ವಿರೋಧಿಸುತ್ತಾರೆ. ಚುನಾವಣೆಯಲ್ಲಿ ಗೋರ್ಖಾಲ್ಯಾಂಡ್ ಪ್ರಶ್ನೆಯನ್ನು ಎತ್ತಬಾರದೆಂದು ಇವರು ಹೇಳುತ್ತಾರೆ. ಆದರೆ ಕಾಂಗ್ರೆಸ್(ಐ) ಪಕ್ಷದ ಕಾರ್ಯಕರ್ತರೇ ಅನೇಕ ವಿಚಿದ್ರಕಾರೀ ಶಕ್ತಿಗಳ ಹಿಂದೆ ಕೆಲಸ ಮಾಡುತ್ತಿದ್ದಾರೆ. ಈ ಗುಡ್ಡಗಾಡು ಪ್ರದೇಶಗಳಲ್ಲಿ ವಿವಿಧ ಜನಾಂಗಗಳ ಏಕತೆಯನ್ನು ಕಾಪಾಡುವುದಕ್ಕಾಗಿ, ಈಗಾಗಲೇ ನಮ್ಮ ಪಕ್ಷದ 28 ಕಾರ್ಯಕರ್ತರು ಹತರಾಗಿದ್ದಾರೆ. ಇನ್ನೆಷ್ಟೊ ಮಂದಿ ಮನೆ ಮಠ ಕಳೆದುಕೊಂಡಿದ್ದಾರೆ. ಜನತೆಯ ಒಗ್ಗಟ್ಟಿಗಾಗಿ ಮಾಡಿದ ಹೋರಾಟ ಒಂದು ಪ್ರಮುಖ ಸಾಧನೆ ಎಂದು ನಮ್ಮ ಪಕ್ಷ ಮತದಾರರಲ್ಲಿ ಧೈರ್ಯವಾಗಿ ಹೇಳುತ್ತಿದೆ.

ಎಡರಂಗ ಈತನಕ ತಾನು ಸಾಧಿಸಿದ ಕೆಲಸ ಹಾಗೂ ಮುಂದೆ ಮಾಡಬೇಕಾದ ಕೆಲಸವನ್ನು ಜನತೆಯ ಮುಂದಿಟ್ಟಿದೆ. ಎಡರಂಗ ಸರಕಾರದ ಸಾಧನೆಯನ್ನು ಮೂರು ಅಂಶಗಳಾಗಿ ವಿಂಗಡಿಸಬಹುದು. i] ಕೆಳಸ್ತರದಿಂದಲೇ ಸರಕಾರದ ಕಾರ್ಯ ನಿರ್ವಹಣೆಯ ಪ್ರಜಾಪ್ರಭುತ್ವೀಕರಣ ii] ಜನತೆಯ ಪ್ರಜಾಪ್ರಭುತ್ವ ಹಕ್ಕುಗಳ ಸಂರಕ್ಷಣೆ ii!] ಕಳೆದ ಹತ್ತು ವರ್ಷಗಳ ಎಡರಂಗದ ಆಳ್ವಿಕೆಯಲ್ಲಿ ಆರ್ಥಿಕ ಅಭಿವೃದ್ಧಿ. ಪಂಚಾಯತ್ ರಾಜ್ಯ ಪದ್ಧತಿಯನ್ನು ಜಾರಿಗೆ ತಂದ ಕಾರಣ, ರಾಜ್ಯದ ಅಭಿವೃದ್ಧಿ ಯೋಜನೆಯಲ್ಲಿ ಜನತೆಯೇ ಪಾಲ್ಗೊಳ್ಳುವಂತೆ ಮಾಡಲು ಸಾಧ್ಯವಾಯಿತು. ಜನತೆ ಹಕ್ಕುಗಳನ್ನು ದಮನ ಮಾಡುವಂತಹ ESMA ಅಥವಾ NASA ಅಥವಾ ಸ್ಥಾನಬದ್ಧತಾ ಕಾನೂನುಗಳನ್ನು ಉಪಯೋಗಿಸಿ ಜನತೆಯ ಹೋರಾಟದ ದಮನ ಮಾಡಲಿಲ್ಲ. 12ಲಕ್ಷ 50ಸಾವಿರ ಎಕ್ರೆಗಳಷ್ಟು ಭೂಮಿಯನ್ನು ಭೂರಹಿತ ಕೃಷಿ ಕೂಲಿಗಾರರಿಗೆ ಹಂಚಲಾಯಿತು. ಈ ಭೂಮಿ ಪಡೆದವರಲ್ಲಿ ಶೇ.57, 16ಲಕ್ಷ 20 ಸಾವಿರ ಜನ ಹರಿಜನರೂ ಗಿರಿಜನರೂ ಆಗಿರುತ್ತಾರೆ.

ಇದರೊಂದಿಗೆ ಅಭಿವೃದ್ಧಿ ಕಾರ್ಯಕ್ರಮಗಳೂ ಸಾಗಿವೆ. 1984-86ರಲ್ಲಿ ಅತೀ ಹೆಚ್ಚಿನ ಆಹಾರ ಧಾನ್ಯ ಬೆಳೆಯಲಾಗಿದೆ. ಎಡರಂಗ ಸರಕಾರದ ಮೊದಲಿನ ೩ವರ್ಷದಲ್ಲಿ ಕೇವಲ 90MW ವಿದ್ಯುತ್ ಉತ್ಪಾದನೆ ಹೆಚ್ಚಿದರೆ, ಎಡರಂಗ ಸರಕಾರ ಬಂದ 10ವರ್ಷಗಳಲ್ಲಿ 1700MW ವಿದ್ಯುತ್ ಉತ್ಪಾದನೆ ಹೆಚ್ಚಿದೆ. ವಿದ್ಯುತ್ ಉತ್ಪಾದನೆಯಲ್ಲಿ ಹೆಚ್ಚಳ ಆದ ಕಾರಣ, ಪ. ಬಂಗಾಳ ಹೆಚ್ಚಿನ ಬಂಡವಾಳವನ್ನು ಆಕರ್ಷಿಸಲು ಸಾಧ್ಯವಾಯಿತು. ಮುಖ್ಯವಾಗಿ ಪೆಟ್ರೋಲಿಯಂ ಹಾಗೂ ಇಲೆಕ್ಟ್ರಾನಿಕ್ಸ್ ಕೈಗಾರಿಕೆಯಲ್ಲಿ ಗಣನೀಯವಾದ ಬಂಡವಾಳದ ಹೂಡಿಕೆ ಆಗಿದೆ. ಸಣ್ಣ ಕೈಗಾರಿಕೆಗಳಲ್ಲಂತೂ ಗಣನೀಯವಾದ ಹೆಚ್ಚಳ ಆಗಿದೆ. ಇಂದು ಪ. ಬಂಗಾಳ, ಮಹಾರಾಷ್ಟ್ರ, ಗುಜರಾತ್, ತಮಿಳುನಾಡುಗಳನ್ನೂ ಹಿಂದೆಹಾಕಿ ಈ ವಿಚಾರದಲ್ಲಿ ದೇಶದಲ್ಲೇ ಮೊದಲನೆಯ ಸ್ಥಾನದಲ್ಲಿದೆ. ಹೆಂಗಸರ ವಿದ್ಯಾಭ್ಯಾಸದಲ್ಲೂ ಪ. ಬಂಗಾಳವು ದೇಶದಲ್ಲೇ ಮೊದಲನೇ ಸ್ಥಾನದಲ್ಲಿದೆ. ಇದಕ್ಕೆ ಮುಖ್ಯ ಕಾರಣ ಸರಕಾರ ಶಿಕ್ಷಣಕ್ಕೆ ಕೊಟ್ಟಂತಹ ಪ್ರಾಮುಖ್ಯತೆ (ಪ. ಬಂಗಾಳ ತನ್ನ ಬಜೆಟ್‌ನ 25%ನ್ನು ಶಿಕ್ಷಣಕ್ಕೆ ಉಪಯೋಗಿಸಿದರೆ ಕೇಂದ್ರ ಸರಕಾರ ಕೇವಲ 1% ಮಾತ್ರ ಉಪಯೋಗಿಸುತ್ತಿದೆ)

24 ಪರಗಣದ ಹಳ್ಳಿಯ ಪ್ರದೇಶದಲ್ಲಿ 2ಲಕ್ಷ ಜನರನ್ನುದ್ದೇಶಿಸಿ ಜ್ಯೋತಿ ಬಸು ಕೇಳಿದರು "ನಮ್ಮ ರಾಜ್ಯವನ್ನು, ಕಾಂಗ್ರೆಸ್‌ನವರು ಆಳುತ್ತಿರುವ ಇತರ ರಾಜ್ಯಗಳನ್ನೂ, ಕೇಂದ್ರವನ್ನು ಹೋಲಿಸಿ ನೋಡಿ, ಕಾಂಗ್ರೆಸ್ [ಐ] ಹೊಸ ಬಂಗಾಳವನ್ನು ರಚಿಸುವುದಾಗಿ ಹೇಳುತ್ತಿದೆ. ಆದರೆ 28 ವರ್ಷ ಅಧಿಕಾರದಲ್ಲಿದ್ದಾಗ ಅವರೇಕೆ ಅದನ್ನು ಮಾಡಲಿಲ್ಲ?" ಈ ರೀತಿ ಜನತೆಯ ನಡುವೆ ನಮ್ಮ ಪಕ್ಷದ, ಎಡರಂಗದ ಪ್ರಚಾರ ಕೆಲಸ ಸಾಗುತ್ತಿರುವಾಗ ಕಾಂಗ್ರೆಸ್(ಐ) ನವರು ಏನು ಮಾಡುತ್ತಿದ್ದಾರೆ? ತಮ್ಮ ತಮ್ಮಲ್ಲೇ ಕಚ್ಚಾಟದಲ್ಲಿ ಮುಳುಗಿದ್ದಾರೆ. ಅವರು ಟಿಲಿವಿಷನ್, ರೇಡಿಯೋ ಮುಂತಾದ ಕೇಂದ್ರ ಸರಕಾರದ ಅಧೀನದಲ್ಲಿರುವ ಪ್ರಚಾರ ಸಾಧನಗಳನ್ನೂ, ಬಂಡವಾಳಶಾಹೀ ಪತ್ರಿಕೆಗಳನ್ನೇ ಅವಲಂಬಿಸಿಕೊಂಡಿದ್ದಾರೆ. ಈ ಸರಕಾರಿ ಮಾಧ್ಯಮಗಳನ್ನು ಎಷ್ಟು ದುರುಪಯೋಗಪಡಿಸಿಕೊಳ್ಳುತ್ತಿದೆಯೆಂದರೆ, ಎಡರಂಗ ತನಗೆ ನಿಗದಿಪಡಿಸಿದ ಸಮಯವನ್ನೂ ಉಪಯೋಗಿಸದೇ ತನ್ನ ಪ್ರತಿಭಟನೆಯನ್ನು ಸೂಚಿಸಿದೆ.

ಸ್ಪರ್ಧಿಗಳು ಯಾರ್ಯಾರು ? ಎಷ್ಟೆಷ್ಟು ?

ಒಟ್ಟು	294
ಎಡರಂಗ–ಸಿ.ಪಿ.ಐ.[ಎಂ]	213
ಫಾರ್ವರ್ಡ್‌ಬ್ಲಾಕ್	34
ಆರ್. ಎಸ್. ಪಿ.	23
ಸಿ. ಪಿ. ಐ.	12
ಡಬ್ಲ್ಯು. ಬಿ. ಎಸ್. ಪಿ.	4
ಡಿ. ಎಸ್. ಪಿ.	3
ಆರ್. ಸಿ. ಪಿ. ಐ.	3
ಮಾರ್ಕ್ಸ್‌ವಾದಿ ಫಾರ್ವರ್ಡ್‌ಬ್ಲಾಕ್	2
ಎಡರಂಗ ಒಟ್ಟು	294
ಕಾಂಗ್ರೆಸ್ [ಐ]	294

ಈ ಎರಡು ಪ್ರಮುಖ ಶಕ್ತಿಗಳ ಹಣಾಹಣೀಯ ಜೊತೆಗೆ ಪ್ರಣಬ್ ಮುಖರ್ಜಿಯವರ ರಾಷ್ಟ್ರೀಯ ಸಮಾಜವಾದಿ ಪಕ್ಷ, ಜನತಾ, ಲೋಕದಳ ಹಾಗೂ ಇತರ ಐದು ಸಣ್ಣ ಪಕ್ಷಗಳ ಗಣೋರಂಗ ಕೂಡಾ 200 ಅಭ್ಯರ್ಥಿಗಳನ್ನು ನಿಲ್ಲಿಸಿದೆ. ಎಸ್. ಯು. ಸಿ. ಐ. ನೇತೃತ್ವದ ಒಂದು ಕೂಟವೂ 75 ಸ್ಥಾನಗಳಿಗೆ ಸ್ಪರ್ಧಿಸಿದೆ.

ಮತ್ತೆ ಮೂರನೇ ಬಾರಿಗೆ ಎಡರಂಗ ಸರ್ಕಾರವನ್ನು ಆರಿಸಿ

ಪ. ಬಂಗಾಳ ಸಿ. ಪಿ. ಐ. (ಎಂ) ರಾಜ್ಯ ಸಮಿತಿ ಮನವಿ

ಎಡರಂಗದ ಹತ್ತಂಶಗಳ ಒತ್ತಾಯ ಹಾಗೂ ಕಾರ್ಯಕ್ರಮದ ಜೊತೆಗೆ ಸಿ.ಪಿ.ಐ (ಎಂ)ನ ಪಶ್ಚಿಮ ಬಂಗಾಳ ರಾಜ್ಯಸಮಿತಿ ಮತ್ತಷ್ಟು ಹೆಚ್ಚಿನ ಬಹುಮತದಿಂದ ಎಡರಂಗವನ್ನು ಗೆಲ್ಲಿಸಿ ಸತತವಾಗಿ ಮೂರನೇ ಬಾರಿ ಎಡರಂಗ ಸರಕಾರ ರಚಿಸಲು ಅಧಿಕಾರ ನೀಡಬೇಕೆಂದು ಮತದಾರರನ್ನು ವಿನಂತಿಸಿಕೊಂಡ ಮನವಿ ಪತ್ರವೊಂದನ್ನು ಹೊರಡಿಸಿದೆ. ಅದರ ಕೆಲವು ಅಂಶಗಳನ್ನು ಇಲ್ಲಿ ಕೊಡುತ್ತಿದ್ದೇವೆ—

"ಎಡರಂಗ ಸರಕಾರದ ಸ್ಥಾಪನೆಯ ಹಿಂದೆ ದಶಕಗಳ ರಕ್ತ, ಬೆವರು, ಕಣ್ಣೀರಿನಿಂದ ಕೂಡಿದ ಅವಿರತ ದುಡಿಮೆ ಮತ್ತು ಚಳುವಳಿ. ಎಡರಂಗ ಎನ್ನುವುದು ಒಂದು ಧೋರಣೆ ಹಾಗೂ ಒಂದು ಕಾರ್ಯಕ್ರಮ ಕೂಡಾ ಹೋರಾಟದ ಮೂರ್ತಿವೆತ್ತ ರೂಪವದು. ಹೋರಾಟಗಳು ಹಾಗೂ ಈ ಹೋರಾಟಗಳ ಅನುಭವಗಳ ಗಟ್ಟಿ ಬುನಾದಿಯ ಮೇಲೆ ಸಮಾನ ವಿಚಾರದ ಪಕ್ಷಗಳು ಪರಸ್ಪರ ಹತ್ತಿರ ಬಂದವು. ಫಲವಾಗಿ ರೂಪುಗೊಂಡ ಎಡರಂಗ ಸರಕಾರ ರಾಜ್ಯದ ಕಾರ್ಮಿಕ ವರ್ಗದ ಆಸೆ, ಆಕಾಂಕ್ಷೆ, ನಿರೀಕ್ಷೆಗಳ ಕಟ್ಟಾ ಪ್ರತಿನಿಧಿಯಾಗಿದೆ.........

ಎಡರಂಗ ಸರಕಾರ ಒಂದು ವಿಶಿಷ್ಟ ಸರಕಾರ. ಯಾಕೆಂದರೆ ಅದು ಕೇವಲ ರೈಟರ್ಸ್ ಬಿಲ್ಡಿಂಗ್ ಅಲ್ಲಿಯ ವಿಧಾನ ಸೌಧದಿಂದಲೇ ಕಾರ್ಯ ನಿರ್ವಹಿಸುತ್ತಿಲ್ಲ. ಗದ್ದೆಗಳಲ್ಲಿ ಮತ್ತು ಕಾರ್ಖಾನೆಗಳಲ್ಲಿ, ಕಛೇರಿಗಳಲ್ಲಿ ಮತ್ತು ಇಲಾಖೆಗಳಲ್ಲಿ, ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳಲ್ಲಿ ಜನಗಳ ಸಮಗ್ರತೆ, ಸಂಘಟನೆ ಮತ್ತು ರಾಜಕೀಯ ಪ್ರಜ್ಞೆಯೇ ಅದರ ಸ್ಫೂರ್ತಿಯ ಸೆಲೆ. ಈ ಅರ್ಥದಲ್ಲಿ ಕಾಂಗ್ರೆಸ್(ಐ) ಎಡರಂಗಕ್ಕೆ ಎಂದೂ ಪರ್ಯಾಯವಾಗಲಾರದು. ಯಾಕೆಂದರೆ ಕಾಂಗ್ರೆಸ್(ಐ) ಎಂದರೆ ಸರ್ವಾಧಿಕಾರ, ತುರ್ತು ಪರಿಸ್ಥಿತಿ, ಕರಾಳ ಕಾನೂನುಗಳು ಮತ್ತು ಸಮಾಜ–ಘಾತುಕರ ಅನಾಚಾರ. ಪಶ್ಚಿಮ ಬಂಗಾಳದ ಹಿಂದಿನ ಕಾಂಗ್ರೆಸ್ ಆಳ್ವಿಕೆಗಳ ಆ ಭಯಾನಕ ದಿನಗಳನ್ನು ಜನಸಾಮಾನ್ಯರು ಎಂದೂ ಮರೆಯುವುದು ಸಾಧ್ಯವಿಲ್ಲ.....

ರಾಜ್ಯವನ್ನು ಬಂಜರು ಬೆಂಗಾಡಾಗಿ ಪರಿವರ್ತಿಸುವ ಕರಾಳ ಪಿತೂರಿಯನ್ನು ವಿಫಲಗೊಳಿಸಿ ರಾಜ್ಯದ ನ್ಯಾಯಪೂರ್ಣ ಬೇಡಿಕೆಗಳನ್ನು, ಈಡೇರಿಸಲೊಲ್ಲದ ಕೇಂದ್ರ ಸರಕಾರದ ಕೈಗಳಿಂದ ಪಡೆದುಕೊಳ್ಳಲು ನಮ್ಮ ಪೂರ್ಣ ಹಾಗೂ ವ್ಯಾಪಕ ಸಾಮರ್ಥ್ಯವನ್ನೆಲ್ಲಾ ಬಳಸುವ ಮತ್ತು ರಾಜ್ಯದ ಕೈಗಾರೀಕರಣಕ್ಕೆ ಅಗತ್ಯವಾದ ಸರಿಯಾದ ಜನಪರ ಹೆಜ್ಜೆಗಳನ್ನು ಧೈರ್ಯದಿಂದ ಮುಂದಿಡುವ ದೃಢನಿರ್ಧಾರ ಮಾಡಿದ್ದೇವೆ....

ರಾಜ್ಯದ ಅವಿಭಾಜ್ಯತೆಯನ್ನು ಮಾತ್ರವಲ್ಲ, ವಿವಿಧ ಭಾಷಾ ಗುಂಪುಗಳ ಐಕ್ಯತೆಯನ್ನು ಕಾಪಾಡಲು ನಾವು ದೃಢ ನಿಶ್ಚಯ ಮಾಡಿದ್ದೇವೆ. ಜನತೆಯ ಜೀವ-ಜೀವನದ ಭದ್ರತೆಗೆ ನಾವು ಸದಾ ಕೂಡಾ ಸಕ್ರಿಯರಾಗಿದ್ದೇವೆ...........

ಸಮಾಜದ ಪುನರ್ರಚನೆಯಲ್ಲಿ ನಮ್ಮ ಪಕ್ಷ ದೃಢ ನಂಬಿಕೆ ಹೊಂದಿದೆ. ಧ್ಯೇಯ ಸಾಧನೆಗೆ ದೇಶದ ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳ ರಭಸದ ಮುನ್ನಡೆಯನ್ನು ಒಂದು ನಿರಂತರ ವಾಸ್ತವ ಸಂಗತಿಯನ್ನಾಗಿ ಮಾಡಲು, ರಾಜ್ಯದ ಜನತೆಯ ವಿಜಯಶಾಲೀ ಮುನ್ನಡೆಗಾಗಿ ಮುಂಬರುವ ವಿಧಾನ ಸಭಾ ಚುನಾವಣೆಗಳಲ್ಲಿ ಎಡರಂಗ ಅಗಾಧ ಬಹುಮತದಿಂದ ಭಾರೀ ವಿಜಯಗಳಿಸುವಂತೆ ಮಾಡಿ ಪಶ್ಚಿಮ ಬಂಗಾಳದಲ್ಲಿ ದಿನೇ ದಿನೇ ಬಲಗೊಳ್ಳುತ್ತಾ ಹೋಗುವ ಎಡರಂಗ ಸರಕಾರವನ್ನು ಸ್ಥಾಪಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ."

ಎಡರಂಗಕ್ಕೆ ಎಸ್. ಎಫ್. ಐ. ಬೆಂಬಲ

ಪಶ್ಚಿಮ ಬಂಗಾಳ ಹಾಗೂ ಕೇರಳ ರಾಜ್ಯಗಳಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಅಲ್ಲಿನ ಎಡರಂಗ ಹಾಗೂ ಎಡ ಪ್ರಜಾ ತಾಂತ್ರಿಕ ರಂಗದ ಗೆಲುವಿಗೆ ಶ್ರಮಿಸಲು ನಿರ್ಧರಿಸಿತು. ವಿಶೇಷವಾಗಿ ಎಸ್.ಎಫ್.ಐ. ದಕ್ಷಿಣ ಕನ್ನಡ ಜಿಲ್ಲಾ ಸಮಿತಿ 'ಕೇರಳದ ಕಾಸರಗೋಡು ಪ್ರದೇಶದಲ್ಲಿ ಪ್ರಚಾರ ಕಾರ್ಯನಿವ ಹಿಸಲು ಕರೆ ಕೊಡಲಾಗಿದೆ. ಕೇರಳದ ಕಡೆ ಹೋಗುವ ರೈಲುಗಳು ಹೊರಡುವ ಸಂದರ್ಭದಲ್ಲಿ ಬೆಂಗಳೂರು ಹಾಗೂ ಮಂಗಳೂರು ರೈಲ್ವೆ ನಿಲ್ದಾಣಗಳಲ್ಲಿ ಎಡ ಪ್ರಜಾತಾಂತ್ರಿಕ ರಂಗಕ್ಕೆ ಬೆಂಬಲ ಸೂಚಿಸಿ ಘೋಷಣೆ ಕೂಗಿ ಪ್ರಚಾರ ನಡೆಸಲು ಕರೆ ಕೊಡಲಾಗಿದೆ.

○

"ಅದು ಧರ್ಮಸ್ಥಳವಲ್ಲ, ಅಧರ್ಮಸ್ಥಳ"

[3ನೇ ಪುಟದಿಂದ]

ವರ ಪಟಾಲಂನಿಂದ 1979ರಲ್ಲಿ ಕೊಲೆಯಾದ ಶ್ರೀಮತಿ ವೇದವಲ್ಲಿಯವರ ಪತಿ ಲೆಕ್ಕಾಣಿಯಿಂದ ತಾವು ಅನುಭವಿಸಿದ ನೋವು, ತಮ್ಮಂತೆಯೇ ನೋವು ಅನುಭವಿಸುತ್ತಿರುವ ರೆಲ್ಲರ ಪರವಾದ ವೇದನೆಯಾಗಿ, ಇದಕ್ಕೆ ಕಾರಣರಾದವರ ಬಗ್ಗೆ ಕ್ರೋಧವಾಗಿ ಪರಿವರ್ತನೆಯಾಗಿತ್ತು. ತಮ್ಮ ಪತ್ನಿಯ ಕೊಲೆಯ ಬಗ್ಗೆ ದೂರು ಪೋಲೀಸು ಠಾಣೆಯ "ಕತ್ತಲ ಕೋಣೆಯಲ್ಲಿ ಕೊಳೆಯುತ್ತಿದೆ" 80-81 ರಲ್ಲಿ ಒಬ್ಬ ವಿದ್ಯಾರ್ಥಿನಿಯ ಕೊಲೆಯೂ ಇದೇರೀತಿ ಸಂಶಯಾಸ್ಪದವಾಗಿ ಜರುಗಿದೆ. ನೇತ್ರಾವತಿಯಲ್ಲಿ ತೇಲಿದ ಹೆಣಗಳ ಹಿಂದೆಲ್ಲಾ ಈ ಪಟ್ಟಭದ್ರ ಶಕ್ತಿಗಳ ಕೈವಾಡ ಇದೆ ಎಂಬುದು ಸರಿಯಾಗಿ ತನಿಖೆ ಮಾಡಿದರೆ ತಿಳಿಯ ಬರುತ್ತದೆ ಎಂದು ತಮ್ಮ ಸಂದೇಶದಲ್ಲಿ ಡಾ. ಹೆರ್ಳೆ ತಿಳಿಸಿದ್ದರು.

ಮಂಗಳೂರಿನ ವಿಚಾರ ವಾದಿಗಳ ಸಂಘದ ಅಧ್ಯಕ್ಷರೂ ಹೋರಾಟ ಸಮಿತಿಯ ಮತ್ತೊಬ್ಬ ಸಂಚಾಲಕರೂ ಆದ ನರೇಂದ್ರ ನಾಯಕ್‌ರವರು ಸಭೆಯ ಅಧ್ಯಕ್ಷತೆವಹಿಸಿ ಇಂದು ದೇವಾನಂದ್‌ರವರಿಗೊದಗಿದ ಗತಿ ನಾಳೆ ನಮ್ಮಲ್ಲಿ ಯಾರಿಗಾದರೂ ಒದಗಬಹುದು ಆದ್ದರಿಂದಲೇ ಈ ವಿಛಿದ್ರ ಶಕ್ತಿಗಳ ಕೈವಾಡದ ಬಗ್ಗೆ ಪ್ರತಿಭಟನೆ ವ್ಯಕ್ತ ಪಡಿಸಬೇಕು ಎಂದರು. ಗೀತಾಸುರತ್ಕಲ್ ಆಭಾರಮನ್ನಣೆ ಮಾಡುತ್ತಾ ದೂರದ ಕುದುರೆ ಮೋತಿಯಲ್ಲಿ ನಡೆದಂತಹ ಘಟನೆ ಈಗ ನಮ್ಮ ಪರಿಸರದಲ್ಲಿಯೇ ಒದಗಿದೆ 21 ನೇ ಶತಮಾನಕ್ಕೆ ಹಾರುವ ಪ್ರಯತ್ನ ನಡೆಸಿರುವ ಭಾರತದ ವಿಪರ್ಯಾಸ ಇದು ಎಂದರು.

ಸಮುದಾಯ ತಂಡದಿಂದ

"ತಾಳಿಕಟ್ಟುವ ಮುನ್ನ
ತವರು ತೊರೆಯುವ ಮುನ್ನ
ಬಾಳ ಮುಗಿಯಿತೆ ತಂಗಿ
ನಮ್ಮ ಉಜಿರೆಯ ತಂಗಿ"

ಎಂಬ ಧ್ವನಿ ಕೇಳುಗರ ಭಾವನೆಗಳನ್ನು ಪ್ರತಿಧ್ವನಿಸಿತ್ತು. ತಂಗಿ ಪದ್ಮಲತಾ ಹಾಗೂ ಅಸಂಖ್ಯಾತ ತಂಗಿ-ಅಕ್ಕಂದಿರಿಗೆ ಒದಗಿದ ದುರಂತಗಳ ಬಗ್ಗೆ ಗಮನ ಸೆಳೆದಿತ್ತು.

○

ಮುಖ್ಯೋಪಾಧ್ಯಾಯರಿಂದ ಹಣ ಲಪಟಾವಣೆ

ಎಸ್. ಎಫ್. ಐ. ಪ್ರತಿಭಟನೆ

ಹೊಸಪೇಟೆ ನಗರದ ಸರ್ದಾರ್ ಪಟೇಲ್ ಸ್ಮಾರಕ ಸರ್ಕಾರಿ ಹೈಸ್ಕೂಲ್‌ನ ಮುಖ್ಯೋಪಾಧ್ಯಾಯ ಕೆ.ಇ. ಅಂಜಿನಪ್ಪನವರು ನಡೆಸಿರುವ ವಿವಿಧ ರೀತಿಯ ಹಣಕಾಸಿನ ದುರ್ವ್ಯವಹಾರಗಳ ಬಗ್ಗೆ, ಹಾಗೂ ಈ ಪ್ರಕರಣದಲ್ಲಿ ಶಾಮೀಲಾಗಿರುವವರ ಮೇಲೆ ಉಗ್ರ ಕ್ರಮ ಕೈಗೊಳ್ಳಬೇಕೆಂದೂ, ಒತ್ತಾಯಿಸಿ 18-2-87ರಂದು ಭಾರತ ವಿದ್ಯಾರ್ಥಿ ಫೆಡರೇಷನ್[ಎಸ್.ಎಫ್.ಐ] ನಗರ ಸಮಿತಿಯ ನೇತೃತ್ವದಲ್ಲಿ 500ಕ್ಕೂ ಅಧಿಕ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಮೆರವಣಿಗೆ, ಬಹಿರಂಗ ಸಭೆ ನಡೆಸಿದರು.

ಬಳ್ಳಾರಿ ಡಿ.ಡಿ.ಪಿ.ಐ. ಆದರ ಆಫೀಸಿನ ಕೃತಕ ಸುತ್ತೋಲೆ ಸೃಷ್ಟಿಸಿ ಮತ್ತು ಫೋರ್ಜರಿ ಸಹಿಮಾಡಿ ಶಾಲೆಗೆ ಬಣ್ಣದ ಟಿ.ವಿ., 16 ಎಂ. ಎಂ. ಕ್ಯಾಮರಾ, ಬೆಂಚ್ ಮುಂತಾದ ಪೀಠೋಪಕರಣಗಳಿಗೆಂದು ರೂ91,000/- ಗಳನ್ನು ಸರಕಾರದ ಟ್ರಜರಿಯಿಂದಲೂ ಪಡೆಯಲಾಗಿದೆ. ಟ್ರಜರಿಯ ಗುಮಾಸ್ತ ಇದರ ಬಗ್ಗೆ ಅನುಮಾನ ವ್ಯಕ್ತಪಡಿಸಿ, ಆಕ್ಷೇಪಿಸಿದನಾದರೂ ಹಿರಿಯ ಅಧಿಕಾರಿಯ ಹಸಿರು ಸಿಗ್ನಲ್‌ನಿಂದಾಗಿ ಮಂಜೂರು ಮಾಡಲಾಗಿದೆ. ಶಿಕ್ಷಕರುಗಳಿಗೆ ರಾಷ್ಟ್ರೀಯ ಉಳಿತಾಯ ಪತ್ರ[NSC) ಗಳ ಮೊತ್ತ ರೂ21,000/-, ವಿದ್ಯಾರ್ಥಿಗಳ ಸ್ಕಾಲರ್‌ಶಿಪ್ ಹಣ ಸುಮಾರು ರೂ10,000/-, ಸಹ ನುಂಗಿದ್ದಾರೆ. ವಿದ್ಯಾರ್ಥಿಗಳಿಂದ ಶಾಲೆಯ ಶುಲ್ಕ ಸಿಕ್ಕಾಪಟ್ಟೆ ವಸೂಲು ಮಾಡಲಾಗಿದೆಯಲ್ಲದೇ ಅವುಗಳಿಗೆ ರಶೀದಿ ನೀಡಲಾಗಿಲ್ಲ ಆರ್.ಆರ್ ಫಂಡ್, ಶಾಂತಿ ಅಭಿವೃದ್ಧಿ ಹಣ ಹೀಗೆ ಸುಮಾರು ಎರಡು ಲಕ್ಷ ರೂ.ಗಳ ದುರ್ವ್ಯವಹಾರ ಮುಖ್ಯೋಪಾಧ್ಯಾಯ ನಡೆಸಿದ್ದಾನೆ.

ಜಂಟೀ ನಿರ್ದೇಶಕರು ಗುಲ್ಬರ್ಗಾ ಅವರು ಈ ಪ್ರಕರಣವು ಹೊರಗೆ ಬಂದ ಬಳಿಕ ಸಸ್ಪೆಂಡ್ ಆಜ್ಞೆ ಹೊರಡಿಸಿದ್ದಾರೆ. ಆದರೆ ಇದೇ ಮುಖ್ಯೋಪಾಧ್ಯಾಯ ಹಿಂದೆ ಕೊಪ್ಪಳದಲ್ಲಿ AEO ಆಗಿದ್ದಾಗ ಒಂದು ಲಕ್ಷ ರೂ.ಗಳನ್ನು ನುಂಗಿ ಹಾಕಿ ಸಸ್ಪೆಂಡ್‌ಆಗಿದ್ದ. ನಂತರ ಹಿಂಬಡ್ತಿಯಾಗಿ ಗುಲ್ಬರ್ಗಾದ ಪ್ರಾಥಮಿಕ ಶಾಲೆಯಲ್ಲಿ ಮುಖ್ಯೋಪಾಧ್ಯಾಯನಾಗಿ ನೇಮಕಗೊಂಡ. ಆದರೆ ಕೆಲವೇ ದಿನಗಳಲ್ಲಿ ಮತ್ತೆ ಮೊಂಬಡ್ತಿ ಪಡೆದು ಸಂಡೂರಿನ AEO ಆಗಿ ನೇಮಕಗೊಂಡ ಇಲ್ಲಿಯೂ ಸಹ ರೂ 80,000/-ರೂ ಗಳ ಭ್ರಷ್ಟಾಚಾರ ನಡೆಸಿ ಪುನಃ ಸಸ್ಪೆಂಡ್ ಆದ. ನಂತರ ಹೈಸ್ಕೂಲಿನಲ್ಲಿ ಮುಖ್ಯೋಪಾಧ್ಯಾಯನಾಗಿ ಮುಂದುವರಿದ.

ಈ ಸಸ್ಪೆಂಡ್ ಮತ್ತು ಪುನರ್‌ನೇಮಕಗೊಳ್ಳುವ ಕಾರ್ಯ ಮುಖ್ಯೋಪಾಧ್ಯಾಯನಿಗೆ ಲೀಲಾಜಾಲವಾಗಿದೆಯಲ್ಲದೇ ಇದರಲ್ಲಿ ಸರ್ಕಾರಿ ಹಿರಿಯ ಅಧಿಕಾರಿಗಳೂ ಮತ್ತು ರಾಜಕೀಯ ಶಾಸಕರೂ, ಮುಖಂಡರುಗಳೂ ಪಾಲ್ಗೊಂಡಿದ್ದಾರೆಂದು ತಿಳಿದು ಬಂದಿದೆ. ಈಗ ಮುಖ್ಯೋಪಾಧ್ಯಾಯ ಕತೆ ತಲೆಮರೆಸಿಕೊಂಡಿದ್ದಾನೆ.

ಆದುದರಿಂದ ಸಸ್ಪೆಂಡ್ ಮತ್ತು ವಿಚಾರಣೆ ಎನ್ನುವುದು ಕೇವಲ ನಾಟಕವಾಗಿದ್ದು ದುರ್ವ್ಯವಹಾರೀ ಮುಖ್ಯೋಪಾಧ್ಯಾಯನನ್ನು ಕೂಡಲೇ ಬಂಧಿಸಿ, ಕೆಲಸದಿಂದ ವಜಾಮಾಡಬೇಕಲ್ಲದೇ ಭ್ರಷ್ಟಾಚಾರ ನಡೆಸಲಾದ ಹಣವನ್ನು ವಾಪಾಸು ಪಡೆದು ಕೂಡಲೇ ಸಂಬಂಧಿಸಿದವರಿಗೆ ಹಿಂತಿರುಗಿಸಬೇಕೆಂದು ಒತ್ತಾಯಿಸಲಾಗಿದೆ. ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಮೇಲೆ ಅಧಿಕಾರಿಗಳು ಒತ್ತಡ ಹೇರುತ್ತಿದ್ದು ಈ ಕ್ರಮಗಳು ಮುಂದುವರಿಕೆಯಲ್ಲಿ ತೀವ್ರವಾಗಿ ಪ್ರತಿಭಟಿಸುವುದೆಂದು ತಿಳಿಸಲಾಗಿದೆ.

ಮೆರವಣಿಗೆಯ ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಎಸ್.ಎಫ್.ಐ.-ರಾಜ್ಯ ಸಮಿತಿ ಉಪಾಧ್ಯಕ್ಷ ಕಾಂ. ಎಸ್.ವೈ. ಗುರುಶಾಂತ್ ಮಾತನಾಡಿ ಪ್ರಕರಣವನ್ನು ವಿಚಾರಿಸಿ, ಶಿಕ್ಷಣ ರಂಗದಲ್ಲಿನ ಭ್ರಷ್ಟಾಚಾರದ ವಿರುದ್ಧ ನಿರಂತರ ಹೋರಾಟ ನಡೆಸಬೇಕೆಂದೂ, ಹಾಗೂ ನಾಗರೀಕ, ನೌಕರರ ಬೆಂಬಲ ಬೇಕೆಂದೂ ತಿಳಿಸಿದರು. ಈ ಹೋರಾಟಕ್ಕೆ ಬೆಂಬಲಿಸಿ ಡಿ.ವೈ.ಎಫ್.ಐ.ನಿಂದ ಕಾಂ. ಪಾಂಡುರಂಗ ಹಾಗೂ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಸದಸ್ಯ ಕಾಂ. ವೀರಸಂಗಯ್ಯನವರು ಮಾತನಾಡಿದರು.

ನಂತರ ಎಸ್. ಎಫ್. ಐ. ಮತ್ತು ಡಿ.ವೈ.ಎಫ್.ಐ.ಗಳ ಜಂಟೀ ಮನವಿ ಪತ್ರವನ್ನೂ ಮುಖ್ಯಮಂತ್ರಿಗಳಿಗೆ ತಲುಪಿಸಲು, ತಹಶೀಲ್ದಾರ್ ಮತ್ತು ಅಸಿಸ್ಟೆಂಟ್ ಕಮಿಷನರ್‌ಗೆ ಸಲ್ಲಿಸಲಾಯಿತು. ಮನವಿ ಪತ್ರವನ್ನು ಕಾಂ. ನೀಲಕಂಠ ಓದಿದರು. ಸ್ವಾಗತ ಕಾಂ. ಎಲ್. ಮಂಜುನಾಥ್, ವಂದನಾರ್ಪಣೆ ಕಾಂ. ಅಮೀರ್.

●

ಡಿ. ವೈ. ಎಫ್. ಐ. ಅಧ್ಯಯನ ಶಿಬಿರ

ಬಾಗೇಪಲ್ಲಿ ತಾಲ್ಲೂಕು ಮಟ್ಟದ ಡಿ.ವೈ.ಎಫ್.ಐ. ಅಧ್ಯಯನ ಶಿಬಿರವು ಫೆಬ್ರವರಿ 28ಮತ್ತು ಮಾರ್ಚ 1ರಂದು ಕದಿರೆನ್ನ ಪಲ್ಲಿಯಲ್ಲಿ ನಡೆಯಿತು. ಶಿಬಿರದಲ್ಲಿ ನಲವತ್ತು ಜನ ಯುವಕರು ಮತ್ತು ಇಬ್ಬರು ಯುವತಿಯರು ಭಾಗವಹಿಸಿದ್ದರು.

ಪ್ರಾರಂಭದಲ್ಲಿ ತಾಲ್ಲೂಕು ಸಂಘಟಕ ಕಾಂ. [illegible] ರವರು ಸ್ವಾಗತಿಸಿ ಮಾತನಾಡಿದರು. ರಾಜ್ಯ ಕಾರ್ಯದರ್ಶಿ ಕಾಂ. ಎಸ್. ಶಿವರಾಂರವರು 'ಭಾರತ ಅದು ನಡೆದು ಬಂದ ದಾರಿ' ಎಂಬ ವಿಷಯದಲ್ಲಿ ಮೊದಲ ಅಧಿವೇಶನದಲ್ಲಿ ಮಾತನಾಡಿದರು. ಮಾಜಿ ರಾಜ್ಯ ಕಾರ್ಯದರ್ಶಿ ಕಾಂ. ಜಿ.ವಿ. ಶ್ರೀರಾಮರೆಡ್ಡಿ ಅವರು 'ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದಲ್ಲಿ ಯುವಜನರ ಪಾತ್ರ' ಎಂಬ ವಿಷಯದಲ್ಲಿ ಮಾತನಾಡಿದರು.

ಮೂರನೇ ಅಧಿವೇಶನದಲ್ಲಿ ಎಸ್. ಶಿವರಾಂರವರು ಡಿ.ವೈ.ಎಫ್.ನ ಕಾರ್ಯಕ್ರಮ, ಸದಸ್ಯತ್ವ ಸಂಘಟನೆ ಹಾಗೂ ಈ ವರ್ಷದ ಕೇಂದ್ರ ಮತ್ತು ರಾಜ್ಯ ಸಮಿತಿಗಳ ತೀರ್ಮಾನಗಳನ್ನು ಹೇಳಿದರು. ಕಾಂ. ಶ್ರೀರಾಮರೆಡ್ಡಿ ಅವರು ಪ್ರಸಕ್ತ ರಾಜಕೀಯ ಪರಿಸ್ಥಿತಿ ಮತ್ತು ಯುವ ಜನರು ವಹಿಸಬೇಕಿರುವ ಪಾತ್ರ ಈ ವಿಷಯದ ಮೇಲೆ ಮಾತನಾಡಿದರು.

ಡಿ. ವೈ. ಎಫ್. ಐ. ಹೊಸ ಗ್ರಾಮ ಸಮಿತಿ

ದ.ಕನ್ನಡದ ಬಸ್ರೂರು ಗ್ರಾಮದಲ್ಲಿ ಡಿ ವೈ.ಎಫ್.ಐ.ನ ಸಭೆ ಕಾ. ಬೋಜರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಗೆ ಮಾರ್ಗೊಳಿ, ಮಡಿ, ಕಳಂಜಿ, ಆನಹಳ್ಳಿ, ಮುಡೇರಿ, ಕೊಳ್ಳೇರಿ, ಹಟ್ಟಿಕೊಡ್ರು, ಬಾಳೆಹಕ್ಲು ಗ್ರಾಮಗಳಿಂದ 60ಕ್ಕೂ ಹೆಚ್ಚು ತರುಣ ತರುಣಿಯರು ಆಗಮಿಸಿದ್ದರು.

ಕಾ. ಎಂ. ಗೋವಿಂದರವರು ಸಭೆಗೆ ಸ್ವಾಗತ ಕೋರಿದರು. ಡಿ. ವೈ. ಎಫ್ ಐ. ರಾಜ್ಯಸಮಿತಿ ಅಧ್ಯಕ್ಷರಾದ ಕಾ. ಮಹಾಬಲ ವಡೇರ ಹೋಬ್ಳಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ಜಿಲ್ಲಾ ಸಮಿತಿ ಸದಸ್ಯರಾದ ಕಾ. ಕೆ. ನಾರಾಯಣ ಆಚಾರಿ ಡಿ. ವೈ. ಎಫ್. ಐ.ನ ಉದ್ದೇಶ ಮತ್ತು ಕಾರ್ಯಕ್ರಮವನ್ನು ವಿವರಿಸಿದರು.

29 ಸದಸ್ಯರನ್ನೊಳಗೊಂಡ ನೂತನ ಸಮಿತಿಯನ್ನು ರಚಿಸಲಾಯಿತು. ಅಧ್ಯಕ್ಷರಾಗಿ ಕಾ ಶಿವರಾಮ ಮೇಸ್ತ್ರಿ ಉಪಾಧ್ಯಕ್ಷರಾಗಿ ಕಾ. ಕೆ. ಉದಯ ಆಚಾರಿ, ಕಾ. ಗೋಪಾಲ ಶೆಟ್ಟಿಗಾರ್ ಕಾರ್ಯದರ್ಶಿಯಾಗಿ ಕಾ. ಎಂ. ಗೋವಿಂದ, ಜೊತೆ ಕಾರ್ಯದರ್ಶಿಯಾಗಿ ಕಾ. ಕೆ. ಸಂಜೀವ ಪೂಜಾರಿ ಮತ್ತು ಎಂ. ಬೋಜ ಕೋಶಾಧಿಕಾರಿಯಾಗಿ ಕಾ. ಎಂ. ಪೂಜಾರಿ ಆಯ್ಕೆಯಾಗಿದ್ದಾರೆ.

ಕೋಟೇಶ್ವರ

ಡಿ.ವೈ.ಎಫ್.ಐ. ನ ಕೋಟೇಶ್ವರ ಘಟಕದ ವಾರ್ಷಿಕ ಮಹಾಸಭೆ ಮಾರ್ಚ್ 3ರಂದು ಕಾ. ಯು. ದಾಸ್ ಭಂಡಾರಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಡಿ. ವೈ. ಎಫ್. ಐ. ರಾಜ್ಯ ಅಧ್ಯಕ್ಷರಾದ ಕಾ. ಮಹಾಬಲ ವಡೇರ ಹೋಬಳಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಉಪಾಧ್ಯಕ್ಷರಾದ ಕಾ. ವೆಂಕಟೇಶ್ ಕೋಣೆ ಡಿ.ವೈ.ಎಫ್.ಐ.ನ ಉದ್ದೇಶ ಮತ್ತು ಕಾರ್ಯಕ್ರಮವನ್ನು ವಿವರಿಸಿದರು. ಸಭೆಯು ಉಜಿರೆ ಕಾಲೇಜಿನ ವಿದ್ಯಾರ್ಥಿನಿ ಪದ್ಮಲತಾ ಸಾವಿನ ಬಗ್ಗೆ ತನಿಖೆ ನಡಸಬೇಕೆಂದು ಸರ್ಕಾರವನ್ನು ಒತ್ತಾಯಿಸುವ ನಿರ್ಣಯ ಕೈಗೊಂಡಿತು. ಘಟಕದ ಅಧ್ಯಕ್ಷರಾಗಿ ಕಾ. ಪಿ. ಕುಮಾರ್ ಉಪಾಧ್ಯಕ್ಷರಾಗಿ ಮುತ್ತ ದೇವಾಡಿಗ, ಕಾ. ಮುತ್ತು, ಕಾರ್ಯದರ್ಶಿಯಾಗಿ ಕಾ. ಗಣಪ ಭಂಡಾರಿ, ಜೊತೆಕಾರ್ಯದರ್ಶಿಗಳಾಗಿ ಕಾ. ಸುಧಾಕರ ಮತ್ತು ಕೋಶಾಧಿಕಾರಿಯಾಗಿ ಕಾ. ರಾಜೀವ ಗೊಲ್ಲ ಆಯ್ಕೆಯಾದರು.

ಪದ್ಮಲತಾ ಕೊಲೆ ಪ್ರಕರಣ

ಉಜಿರೆ ಕಾಲೇಜಿನ ವಿದ್ಯಾರ್ಥಿನಿ ಪದ್ಮಲತಾ ಕೊಲೆ ಪ್ರಕರಣದ ಬಗ್ಗೆ ನ್ಯಾಯಾಂಗ ತನಿಖೆ ನಡಸಲು ಡಿ.ವೈ.ಎಫ್.ಐ. ಕುಂದಾಪುರ ತಾಲೂಕು ಸಮಿತಿ ಸರ್ಕಾರವನ್ನು ಆಗ್ರಹಪಡಿಸಿದೆ. ಮಾರ್ಚ್ 29 ರಂದು ಡಿ.ವೈ ಎಫ್ ಐ ಕುಂದಾಪುರ ತಾಲೂಕು ಸಮಾವೇಶವು ಕೋಣೆಯಲ್ಲಿ ಜರುಗುವುದೆಂದೂ, ಪದ್ಮಲತ ಪ್ರಕರಣದಬಗ್ಗೆ ಸಮಾವೇಶವು ಚರ್ಚಿಸಿ, ಹೋರಾಟದ ಕ್ರಮಗಳನ್ನು ಕೈಗೊಳ್ಳುವುದೆಂದ ಕಾರ್ಯದರ್ಶಿ ನಾರಾಯಣ ಆಚಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದ. ಸಂ. ಸ. ಗೂಂಡಾಗಳಿಂದ ಭೀಕರ ಕೊಲೆ

ಗಂಗಾವತಿ ತಾಲ್ಲೂಕಿನ ಆರ್ಹಾಳ ನಿವಾಸಿಯಾದ ತಿಮ್ಮಪ್ಪಎಂಬುವರನ್ನು ಕರ್ನಾಟಕದ ದಲಿತ ಸಂಘರ್ಷ ಸಮಿತಿಯ ಗೂಂಡಾಗಳು ಫೆಬ್ರವರಿ16 ರಂದು ಭೀಕರವಾಗಿ ಕೊಲೆ ಮಾಡಿದ್ದಾರೆ. ಕೊಲೆಯಾದ ತಿಮ್ಮಪ್ಪಎಂಬುವರು ಕರ್ನಾಟಕ ಪ್ರಾಂತ ರೈತ ಸಂಘದ ಸಕ್ರಿಯ ಕಾರ್ಯಕರ್ತರಾಗಿದ್ದಾರೆ. ದ. ಸಂ. ಸ. ಮುಖಂಡರಾದ ಭಾಗ್ಯವಂತಪ್ಪ ಎಂಬವನು 16ಜನರ ಗುಂಪಿನೊಂದಿಗೆ ಈಳಿಗೇರ ಅಂಜನೇಯ, ನಾಗಪ್ಪ ಅವರುಗಳನ್ನು ತೀವ್ರವಾಗಿ ಗಾಯಗೊಳಿಸಿ ತಿಮ್ಮಪ್ಪನನ್ನು ಸೈಕಲ್‌ಚೈನ್, ಬಡಿಗೆಗಳಿಂದ ಹೊಡೆದು ಅಮಾನುಷವಾಗಿ ಕೊಲೆ ಮಾಡಿದ್ದಾರೆ. ಕೊಲೆಯಾದ ತಿಮ್ಮಪ್ಪ ವಡ್ಡರ ಜಾತಿಗೆ ಸೇರಿದ್ದು ದಲಿತ ಸಂಘರ್ಷ ಸಮಿತಿಯ ಗೂಂಡಾಗಳು ತಮ್ಮ ಸಂಘಟನೆಗೆ ಸೇರಬೇಕೆಂದೂ ಒತ್ತಾಯಿಸುತ್ತಿದ್ದರೆಂದು ಆಗಾಗ ಕೊಲೆಬೆದರಿಕೆ ಹಾಕುತ್ತಿದ್ದರೆಂದೂ ತಿಳಿದು ಬಂದಿದೆ. ತಿಮ್ಮಪ್ಪನ ಕೊಲೆಯಲ್ಲಿ ಭಾಗವಹಿಸಿದ 16 ಜನರ ಪಟ್ಟಿಯನ್ನು ರೈತ ಸಂಘ ಪ್ರಕಟಿಸಿ, ಪೋಲೀಸರಿಗೆ ದೂರು ನೀಡಿದೆ. ಗಾಯಗೊಂಡಿರುವ ನಾಗಪ್ಪ ಎಂಬುವರು ಘಟನೆಯ ಪೂರ್ಣ ವಿವರವನ್ನು ನೀಡಿ ಕರ್ನಾಟಕ ರಾಜ್ಯ ಸರ್ಕಾರದ ಗೃಹ ಸಚಿವರಿಗೆ ಪತ್ರಬರೆದು ಆರೋಪಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ. ಆದಾಗ್ಯೂ ಪೋಲೀಸರು ನಿರ್ಲಕ್ಷ್ಯ ತೋರಿಸುತ್ತಿದ್ದಾರೆ.

ಕರ್ನಾಟಕ ಪ್ರಾಂತ ರೈತ ಸಂಘದ ಆರ್ಹಾಳ ಘಟಕವು ತಪ್ಪಿತಸ್ಥ ದಲಿತ ಸಂಘರ್ಷ ಸಮಿತಿಯ ರೌಡಿಗಳನ್ನು ಬಂಧಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಗೃಹ ಸಚಿವರಿಗೆ ಬರೆದಿರುವ ಪತ್ರದಲ್ಲಿ ಒತ್ತಾಯಿಸಿದೆ.

○

ದಕ್ಷಿಣ ಆಫ್ರಿಕಾದ ಹೋರಾಟದಲ್ಲಿ ಕಮ್ಯುನಿಸ್ಟರು

"ಹಲವಾರು ದಶಕಗಳ ಕಾಲ ದಕ್ಷಿಣ ಆಫ್ರಿಕಾದಲ್ಲಿ ಆಫ್ರಿಕನ್ನರನ್ನು ಮಾನವರು ಹಾಗೂ ಸಮಾನರು ಎಂದು ಪರಿಗಣಿಸಿದ ಏಕೈಕ ರಾಜಕೀಯ ಗುಂಪೆಂದರೆ ಕಮ್ಯುನಿಸ್ಟರು. ಆದ್ದರಿಂದಲೇ ಈಗ ಬಹಳಷ್ಟು ಆಫ್ರಿಕನ್ನರು ಸ್ವಾತಂತ್ರ್ಯವನ್ನು ಸಮತಾವಾದದೊಂದಿಗೆ ಸಮೀಕರಿಸುತ್ತಾರೆ" – 1964ರ ಜೂನ್ ನಲ್ಲಿ ಒಂದು ಕೋರ್ಟ್ ವಿಚಾರಣೆಯ ಸಂದರ್ಭದಲ್ಲಿ ನೆಲ್ಸನ್ ಮ್ಯಾಂಡೆಲಾರು ಈ ನುಡಿ ದಕ್ಷಿಣ ಆಫ್ರಿಕಾದ ಹೋರಾಟದಲ್ಲಿ ಕಮ್ಯುನಿಸ್ಟರ ಪಾತ್ರ ಎಷ್ಟು ಆಳವಾಗಿತ್ತು ಎಂಬುದರ ಒಂದು ಸುಳಿವು ನೀಡುತ್ತದೆ.

ದಕ್ಷಿಣ ಆಫ್ರಿಕಾದ ಜನತೆ ಸದಾ ಕಮ್ಯುನಿಸ್ಟರನ್ನು ಫ್ಯಾಸಿಸ್ಟ ವರ್ಣದ್ವೇಷದ ವಿರುದ್ಧ, ಅದರ ಭಯೋತ್ಪಾದಕತೆಯ ವಿರುದ್ಧ ನಿರ್ಭಯ ಹಾಗೂ ಯಾವ ರಾಜಿಗೂ ಒಪ್ಪದ ಹೋರಾಟಗಾರರೆಂದೇ ಗುರುತಿಸಿದೆ. ಜೆ. ಬಿ ಮಾರ್ಕ್ಸ್, ಮೋಸೆಸ್ ಕೊಟಾನೆ, ಡಾ. ದಯ್ಡೂ ಹಾಗೂ ಈಗ ಜೀವಾವಧಿ ಶಿಕ್ಷೆಗೊಳಗಾಗಿರುವ ಬ್ರಾಮ್‌ಫಿಶರ್, ಗೋವಾನ್ ಮಂಬೇಕಿ, ಅಹ್ಮದ್ ಕಥ್ರಾಡಾ ಮೊದಲಾದ ಕಮ್ಯುನಿಸ್ಟ್ ಮುಖಂಡರು ನೆಲ್ಸನ್ ಮ್ಯಾಂಡೆಲಾ, ವಾಲ್ಟರ್ ಸಿಸುಲರಷ್ಟೇ ಜನಪ್ರಿಯ, ಗೌರವಾನ್ವಿತ ಆಫ್ರಿಕ್ ರಾಷ್ಟ್ರೀಯ ಕಾಂಗ್ರೆಸ್ [ಎ.ಎನ್.ಸಿ.] ಮುಖಂಡರು ಇತ್ತೀಚೆಗೆ ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾಗಿ ಚುನಾಯಿತರಾದ ಜೋ ಸ್ಲೋವೋ ಎ. ಎನ್. ಸಿ. ಯ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಏಕಮಾತ್ರ ಬಿಳಿಯ ಸದಸ್ಯರು ಮಾತ್ರವಲ್ಲ, ಕಳೆದ ವರ್ಷ ತನ್ನ ಬೆಳ್ಳಿಹಬ್ಬವನ್ನು ಆಚರಿಸಿದ ಎ.ಎನ್.ಸಿ.ಯ ಜನತಾ ಸೇನೆಯು ಉಮ್‌ಕೊಂಡೋ ವಿ ಸಿಜ್ವೆ – ಮುಖ್ಯಸ್ಥರೂ ಕೂಡಾ ಎಂಬುದು ನಮ್ಮ ಓದುಗರಿಗೆ ಈಗಾಗಲೇ ತಿಳಿದಿದೆ.

ಅಮೆರಿಕನ್ ಸಾಮ್ರಾಜ್ಯಶಾಹಿಗಳು ಕಮ್ಯುನಿಸ್ಟರ ಈ ಆಳವಾದ ಪಾತ್ರವನ್ನೇ ಮುಂದುಮಾಡಿ ಎ. ಎನ್.ಸಿ. ಮಾಸ್ಕೋದ ನಿರ್ದೇಶನದಂತೆ ಕುಣಿಯುವ ಕೈಗೊಂಬೆ ಎಂದು ಅಪಪ್ರಚಾರ ಮಾಡಲು ಪ್ರಯತ್ನಿಸಿ ವಿಫಲರಾದದ್ದು. ಕಳೆದ ವರ್ಷ ಬೋಥಾ ಸರ್ಕಾರ ರೇಗನ್‌ರ ಕೃಪೆ ಮುಂದುವರಿಯಲೆಂದು ಎ.ಎನ್.ಸಿ. ಯ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ 30 ಸದಸ್ಯರಲ್ಲಿ 23 ಮಂದಿ ಕಮ್ಯುನಿಸ್ಟರು ಅಥವಾ ಅವರ ಹಿತೈಷಿಗಳೆಂದು ಪಟ್ಟಿ ಮಾಡಿ ಹಂಚಿತ್ತು. ಈ ಬಗ್ಗೆ ಎ.ಎನ್.ಸಿ. ಅಧ್ಯಕ್ಷ ತಾಂಬೋರವರನ್ನು ಕೇಳಿದಾಗ ಅವರು ಏನೆಂದರು ಗೊತ್ತೆ ? "ನನಗದು ಬೇಕಿಲ್ಲ. ಎ.ಎನ್.ಸಿ. ಬಗ್ಗೆ ಅವಿಭಾಜ್ಯ ನಿಷ್ಠೆಯಷ್ಟೇ ನನಗೆ ಮುಖ್ಯ. ಅದು ಸದಾ ಪುಷ್ಕಳವಾಗಿ ಇದೆ". ದಕ್ಷಿಣ ಆಫ್ರಿಕಾದ ಹೋರಾಟಗಾರರಿಗೆ ಕಮ್ಯುನಿಸ್ಟರು ಸ್ವಾಭಾವಿಕ ಮಿತ್ರರು.

ಎಲ್ಲ ದೇಶಗಳಂತೆ ದಕ್ಷಿಣ ಆಫ್ರಿಕಾದಲ್ಲೂ ಬಂಡವಾಳಶಾಹಿ ಕಾರ್ಮಿಕ ವರ್ಗವನ್ನು ಸೃಷ್ಟಿಸಿತು ಅದರ ಬೆಳವಣಿಗೆಯೊಂದಿಗೆ ಕಾರ್ಮಿಕ ಸಂಘಟನೆಗಳು ಹಾಗೂ 1921ರ ಜುಲೈ 30 ರಂದು ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ಪಕ್ಷ [ಇ.ಪಿ ಎಸ್.ಎ.] ಸ್ಥಾಪನೆಯಾಯಿತು ನಂತರ ಕೆಲವೇ ಸಮಯದಲ್ಲಿ ಅದು ಮುಖ್ಯತಃ ಕರಿಯ ಕಾರ್ಮಿಕರ ಪಕ್ಷವಾಗಿ ಬೆಳೆಯಲಾರಂಭಿಸಿತು. 1928ರಲ್ಲಿ ಅದು ಅಂಗೀಕರಿಸಿದ "ಕರಿಯ ಗಣತಂತ್ರ"ದ ಸಿದ್ಧಾಂತ. ದಕ್ಷಿಣ ಆಫ್ರಿಕಾದ ಇತಿಹಾಸದಲ್ಲೇ ಮೊತ್ತಮೊದಲ ಬಾರಿಗೆ ಹೋರಾಟದ ಉದ್ದೇಶ ಕರಿಯ ಬಹುಸಂಖ್ಯಾತರ ಆಳ್ವಿಕೆಯೆಂಬ ವಿಚಾರವನ್ನು ಬಿತ್ತಿ ದಕ್ಷಿಣ ಆಫ್ರಿಕಾದ ಕರಿಯರ ಹೋರಾಟಕ್ಕೆ ಹೊಸ ಚೈತನ್ಯ ನೀಡಿತು.

[8ನೇ ಪುಟ ನೋಡಿ]

ಮಾರ್ಚ್ 21 ರಂದು "ಅಪಾರ್ಥೀಡ್ ವಿರೋಧಿ ದಿನಾಚರಣೆ"

ಜನವರಿ 16 ರಂದು ನವದೆಹಲಿಯಲ್ಲಿ ದೇಶದ ಕೇಂದ್ರ ಕಾರ್ಮಿಕ ಸಂಘಟನೆಗಳು ಒಟ್ಟುಸೇರಿ "ವರ್ಣದ್ವೇಷದ ವಿರುದ್ಧ ಭಾರತೀಯ ಕಾರ್ಮಿಕ ಸಂಘಸಮಿತಿ" ರಚಿಸಿಕೊಂಡಿವೆ. ದಕ್ಷಿಣ ಆಫ್ರಿಕಾದ ಅಲ್ಪಸಂಖ್ಯಾತ ಬೋಥಾ ಸರಕಾರದ ಜನಾಂಗ ದ್ವೇಷಿ ಆಳ್ವಿಕೆಯ ವಿರುದ್ಧ ಅಲ್ಲಿನ ಕಾರ್ಮಿಕರ, ಜನತೆಯ ಹೋರಾಟವನ್ನು ಜನ ಜನಿತಗೊಳಿಸುವುದು ಇದರ ಉದ್ದೇಶ. ಇದರ ಅಂಗವಾಗಿ ಮಾರ್ಚ 21ರಂದು "ವರ್ಣದ್ವೇಷ-ವಿರೋಧಿ ದಿನಾಚರಣೆ" ಯನ್ನು ದೇಶಾದ್ಯಂತ ಸಭೆ, ಮತಪ್ರದರ್ಶನಗಳ ಮೂಲಕ ನಡೆಸಬೇಕೆಂದು ಕರೆ ನೀಡಿದೆ. ಮೇ 1-1987ರೊಳಗಾಗಿ ದಕ್ಷಿಣ ಆಫ್ರಿಕಾದ ಧೀರ ಸ್ವಾತಂತ್ರ್ಯ ಹೋರಾಟಗಾರರಿಗೆ ನೆರವಾಗಲು ಭಾರತದ ಕಾರ್ಮಿಕರಿಂದ ಒಂದು ಕೋಟಿ ರೂ ಸಂಗ್ರಹಿಸುವ ಗುರಿಯನ್ನು ಈ ಸಮಿತಿ ಇಟ್ಟುಕೊಂಡಿದೆ.

ದೇಶ – ವಿದೇಶ

ಆಂಧ್ರ ಪ್ರದೇಶ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ

ಎರಡು ಕಮ್ಯುನಿಸ್ಟ್ ಪಕ್ಷಗಳು, ಎರಡು ಧೋರಣೆಗಳು

ಆಂಧ್ರ ಪ್ರದೇಶದಲ್ಲಿ ಮಂಡಲ ಮತ್ತು ಜಿಲ್ಲಾ ಪರಿಷತ್ತುಗಳಿಗೆ ಚುನಾವಣೆಗಳು ನಡೆಯುತ್ತಿರುವುದು ಇದೀಗ ಆರು ವರ್ಷಗಳ ಬಳಿಕ. ದೇಶದಲ್ಲಿ ವಿರೋಧ ಪಕ್ಷಗಳು ಆಡಳಿತ ನಡೆಸುತ್ತಿರುವ ಕೆಲವೇ ರಾಜ್ಯಗಳಲ್ಲಿ ಆಂಧ್ರ ಪ್ರದೇಶವೂ ಒಂದು. ಆಂಧ್ರ ಪ್ರದೇಶವನ್ನು ಒಳಗೊಂಡಂತೆ ಯಾವ ರಾಜ್ಯಗಳಲ್ಲಿ ವಿರೋಧ ಪಕ್ಷದ ಆಡಳಿತವಿದೆಯೋ ಅಲ್ಲೆಲ್ಲ ಚುನಾಯಿತ ಸರ್ಕಾರಗಳನ್ನು ಹೇಗಾದರೂ ಬುಡಮೇಲುಮಾಡಿ ತನ್ನ ಏಕಾಧಿಪತ್ಯವನ್ನು ಸ್ಥಾಪಿಸಬೇಕೆಂದು ಕೇಂದ್ರ ಸರ್ಕಾರ ಮತ್ತು ಕಾಂಗ್ರೆಸ್ [ಐ] ಸಂಚು ನಡೆಸುತ್ತಿರುವುದು ಎಲ್ಲರಿಗೂ ಗೊತ್ತು. ಕಳೆದ ವರ್ಷ ಕೇಂದ್ರ ಸಚಿವರಾದ ಶ್ರೀವೆಂಗಲ ರಾವ್ ಮತ್ತು ಕೆ.ಕೆ. ತಿವಾರಿಯವರು ತಮ್ಮ ಆಂಧ್ರ ಪ್ರದೇಶದ ಭೇಟಿಯ ವೇಳೆ ತೆಲುಗು ದೇಶಂ ಸರ್ಕಾರವನ್ನು ಕಿತ್ತು ಹಾಕಲು ವಿಮೋಚನಾ ಸಮರ ನಡೆಸಬೇಕೆಂದು ಬಹಿರಂಗ ಕರೆನೀಡಿದ್ದರು. ಇಂತಹ ಪರಿಸ್ಥಿತಿಯಲ್ಲಿ ದೇಶದ ಯಾವುದೇ ರಾಜ್ಯದಲ್ಲಾದರೂ ವಿರೋಧ ಪಕ್ಷಗಳ ಸರ್ಕಾರ ಉಳಿಯುವುದು ಸಾಧ್ಯವೇ ಅಥವಾ ಎಲ್ಲಾ ರಾಜ್ಯಗಳೂ ಕಾಂಗ್ರೆಸ್‌ನ ಗುತ್ತೇದಾರಿ ಆಡಳಿತೆಯಲ್ಲೇ ಇರಬೇಕೆ ಎನ್ನುವುದು ಮುಖ್ಯ ಪ್ರಶ್ನೆ.

ಆಂಧ್ರ ಪ್ರದೇಶದಲ್ಲಿ ಸ್ಥಳೀಯಸಂಸ್ಥೆಗಳಿಗೆ ಪಕ್ಷಗಳ ಆಧಾರದಲ್ಲಿ ಚುನಾವಣೆ ನಡೆಯುವುದು ಇದೇ ಮೊದಲ ಬಾರಿ. ತೆಲುಗುದೇಶಂ ಪಕ್ಷವು ಸಿ.ಪಿ ಐ.[ಎಂ] ಜೊತೆಗೆ ಹೊಂದಾಣಿಕೆಗೆ ಬರಲು ಬಯಸಿದಾಗ ಸಿ.ಪಿ.ಐ. ಯನ್ನೂ ಈ ಹೊಂದಾಣಿಕೆಗೆ ಬರುವಂತೆ ಆಮಂತ್ರಿಸಬೇಕೆಂದು ನಮ್ಮ ಪಕ್ಷ ಸಲಹೆ ಮಾಡಿತ್ತು. ಆದರೆ ಸಿಪಿಐ ಆಹ್ವಾನವನ್ನು ತಿರಸ್ಕರಿಸಿ ಏಕಪಕ್ಷೀಯವಾಗಿ ತನ್ನ ಅಭ್ಯರ್ಥಿಗಳ ಹೆಸರನ್ನು ಘೋಷಿಸಿತು. ತೆಲುಗುದೇಶಂ ಪಕ್ಷವು ಪ್ರತಿಗಾಮಿಯೆಂದೂ ಅದಕ್ಕೆ ವಿರುದ್ಧವಾಗಿ ಎಲ್ಲಾ ಪಕ್ಷಗಳ ಮೂರನೇ ರಂಗವೊಂದನ್ನು ರಚಿಸಬೇಕೆಂದೂ ಸಿ.ಪಿ.ಐ. ನ ವಾದ.ಆದರೆ ಈ ಮೂರನೇ ರಂಗದಿಂದ ಪ್ರಯೋಜನವಾಗುವುದು ಯಾರಿಗೆ ? ಆಂಧ್ರ ಪ್ರದೇಶದಲ್ಲಿ ಸಿ.ಪಿ ಐ. [ಎಂ] ಮತ್ತು ಸಿ. ಪಿ. ಐ. ಎರಡೂ ಪಕ್ಷಗಳ ಬಲವನ್ನು ಒಟ್ಟು ಸೇರಿಸಿದಲ್ಲಿ ಒಟ್ಟು ಮತದಾರರಲ್ಲಿ ಶೇಕಡಾ 10 ರಿಂದ 15 ರಷ್ಟು ಮಾತ್ರ ಬೆಂಬಲ ಗಳಿಸಲು ಸಾಧ್ಯ. ವಾಸ್ತವಿಕ ಪರಿಸ್ಥಿತಿ ಹೀಗಿರುವಾಗ ಮೂರನೇ ರಂಗವೊಂದನ್ನು ರಚಿಸಿದರೆ ವಿರೋಧ ಪಕ್ಷಗಳ ಮತಗಳು ಇಬ್ಭಾಗವಾಗಿ ಕಾಂಗ್ರೆಸ್ [ಐ] ಗೆ ಅನುಕೂಲವಾಗುವುದು ಖಂಡಿತ. ಕಾಂಗ್ರೆಸ್[ಐ] ಪಕ್ಷಕ್ಕೆ ಇಂತಹ ಅನುಕೂಲಕರ ಪರಿಸ್ಥಿತಿಯುಂಟು ಮಾಡುವುದೇ ಸಿ.ಪಿ ಐ.ನ ಹಂಬಲವೇ ? ತೆಲುಗುದೇಶಂ ಪಕ್ಷ ಬಂಡವಾಳಶಾಹಿ ಪಕ್ಷ ನಿಜ. ಅದರ ಪ್ರತಿಗಾಮಿ ಮತ್ತು ಜನವಿರೋಧಿ ಕ್ರಮಗಳ ವಿರುದ್ಧ ಜನತೆಯನ್ನು ಒಂದುಗೂಡಿಸಿ ಹೋರಾಡಲು ಸಿ.ಪಿ.ಐ. [ಎಂ] ಸದಾ ಸಿದ್ಧ. ಆದರೆ ಬಂಡವಾಳಶಾಹಿ ವರ್ಗದ ಪ್ರಮುಖ ಪ್ರತಿನಿಧಿಯಾದ ಕಾಂಗ್ರೆಸ್ [ಐ] ತೆಲುಗುದೇಶಂನಷ್ಟೇ ಅಥವಾ ಅದಕ್ಕಿಂತಲೂ ಹೆಚ್ಚು ಅಪಾಯಕಾರಿ.

ತೆಲುಗು ದೇಶಂ ಜೊತೆಗೆ ಸಿ.ಪಿ ಐ. [ಎಂ] ನ ಹೊಂದಾಣಿಕೆಯ ವಿರುದ್ಧ ಇಷ್ಟೆಲ್ಲಾ ಕೆಂಡಕಾರುವ ಸಿ. ಪಿ. ಐ. 1984ರ ಲೋಕಸಭಾ ಚುನಾವಣೆಯ ವೇಳೆ ಖಮ್ಮಂ ಕ್ಷೇತ್ರದಲ್ಲಿ ಸಿ ಪಿ.ಐ. [ಎಂ] ಅಭ್ಯರ್ಥಿಯನ್ನು ಸೋಲಿಸಲು "ಪ್ರತಿಗಾಮಿ" ತೆಲುಗುದೇಶಂ ಜೊತೆಗೆ ಕೈಜೋಡಿಸಿತು. ಎನ್. ಟಿ. ರಾಮರಾವ್ ಅವರ ಆಳೆತ್ತರದ ಕಟೌಟ್‌ಗಳನ್ನು ನಿಲ್ಲಿಸಿ ಅದರ ಎದೆಯಲ್ಲಿ ಸಿ.ಪಿ. ಐ. ನ ಚುನಾವಣಾ ಚಿಹ್ನೆಯನ್ನು ತೊಡಿಸಿ ಪ್ರಚಾರ ನಡೆಸಿತ್ತು ಎನ್ನುವುದನ್ನು ಸಿ.ಪಿ.ಐ. ಸ್ನೇಹಿತರು ಮರೆತಿದ್ದಾರೆ.

ಎನ್. ಜಿ. ಓ. ನೌಕರರ ಮುಷ್ಕರದ ವೇಳೆಯೂ ಸಿ.ಪಿ.ಐ. ತೆಲುಗು ದೇಶಂ ಸರ್ಕಾರಕ್ಕೆ ಹಾನಿಯುಂಟಾಗುವಂತೆ ಕಾಂಗ್ರೆಸ್ [ಐ] ನೇತೃತ್ವದ ಸರ್ವಪಕ್ಷಗಳ ರಂಗದ ಜೊತೆ ಸೇರಿ ರಸ್ತಾ ರೋಖೋ ದಂತಹ ಕಾರ್ಯಕ್ರಮ ನಡೆಸಿದೆ. ಈ ರಂಗದಲ್ಲಿ ಬಿ. ಜೆ.ಪಿ., ನಕ್ಸಲೀಯರು ಮತ್ತು ಮಜ್ಲಿಸ್‌ನಂತಹ ಪಕ್ಷಗಳೂ ಇದ್ದವೆನ್ನುವುದನ್ನು ಮರೆಯಲಾಗದು. ಸಿ.ಪಿ.ಐ. [ಎಂ] ಮಾತ್ರ ಸರಿಯಾದ ನಿಲುವು ತಳೆದು ಪ್ರತಿಹಂತದಲ್ಲೂ ಎನ್.ಜಿ. ಓ. ಗಳ ಹೋರಾಟಕ್ಕೆ ಪೂರ್ಣಬೆಂಬಲ ನೀಡುತ್ತಿರುವಾಗಲೇ ಕಾಂಗ್ರೆಸ್ [ಐ] ಯನ್ನು ಮರಳಿ ಅಧಿಕಾರಕ್ಕೆ ತರಬಲ್ಲಂತಹ "ರಾಸ್ತಾ ರೋಖೋ" ಕಾರ್ಯಕ್ರಮಗಳಿಂದ ದೂರ ಸರಿದಿದೆ. ಆದರೆ ಸಿ.ಪಿ.ಐ. ಇದಕ್ಕೆ ವಿರುದ್ಧವಾಗಿ ತೆಲುಗುದೇಶಂ ಸರ್ಕಾರವನ್ನು ಕಿತ್ತೊಗೆಯಲು ಕಾಂಗ್ರೆಸ್ (ಐ) ಮರಳಿಗಾದಿಗೆ ಬರುವಂತೆ ಮಾಡಬಲ್ಲ ನೀತಿಯನ್ನೇ ಅನುಸರಿಸುತ್ತಿದೆ. ಸಿ ಪಿ.ಐ. [ಎಂ] ವಿರುದ್ಧ ಸಿ. ಪಿ. ಐ. ಮಾಡುತ್ತಿರುವ ಇತ್ತೀಚಿನ ಅದರ ಅಪಾಲಾಪಗಳು ಕಾಂಗ್ರೆಸ್ (ಐ) ಯನ್ನು ಮತ್ತೆ ಅಧಿಕಾರಕ್ಕೆ ತರಬೇಕೆಂಬ ಅದರ ಈ ಹಂಬಲದ ಸೂಚನೆಯೇ ?

ಜಿ. ಎನ್. ಎಲ್. ಎಫ್. : ಚಳುವಳಿ

ನಿಲ್ಲದ ಹತ್ಯಾಕಾಂಡ

ಪ. ಬಂಗಾಳದ ಡಾರ್ಜಿಲಿಂಗ್‌ನಲ್ಲಿ ಗೂರ್ಖಾ ವಿಮೋಚನಾ ರಂಗದ ಹೆಸರಿನಲ್ಲಿ ನಡೆಸಲಾಗುತ್ತಿರುವ ಭಯೋತ್ಪಾದಕ ಕೃತ್ಯಗಳಿಗೆ ತಡೆಹಾಕಲು ತಕ್ಷಣ ಸೂಕ್ತ ಕ್ರಮಕೈಗೊಳ್ಳಬೇಕೆಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ ಲೋಕ ಸಭಾ ಸದಸ್ಯ ಕಾ. ಆನಂದ್ ಪಾಠಕ್ ಅವರು ಗೃಹ ಸಚಿವ ಬೂಟಾ ಸಿಂಗ್ ಅವರನ್ನು ಒತ್ತಾಯಿಸಿ ಮನವಿಯೊಂದನ್ನು ನೀಡಿದ್ದಾರೆ. ಕಳೆದ ಜನವರಿ 25, 26 ರಂದು ಜಿ.ಎನ್.ಎಲ್. ಎಫ್. ನ ನಾಯಕ ಸುಭಾಶ್‌ಘೈಶಿಂಗ್ ನವದೆಹಲಿಯಲ್ಲಿ ಕೇಂದ್ರ ಗೃಹ ಸಚಿವರೊಂದಿಗೆ ನಡೆಸಿದ ಮಾತುಕತೆಗಳ ಬಳಿಕ ಎರಡು ತಿಂಗಳ ಕಾಲ ಚಳುವಳಿ ನಿಲುಗಡೆ ಮಾಡುವುದಾಗಿ ಹೇಳಿಕೊಂಡಿದ್ದರೂ ಡಾರ್ಜಿಲಿಂಗ್‌ನಲ್ಲಿ ಜಿ.ಎನ್. ಎಲ್. ಎಫ್.ನ ಹಿಂಸಾಕಾಂಡ ಅವ್ಯಾಹತವಾಗಿ ಸಾಗುತ್ತಿದೆ. ಘೀಶಿಂಗ್‌ನ ಅನುಚರರು ಮುಖ್ಯವಾಗಿ ಸಿ.ಪಿ.ಐ. (ಎಂ) ನ ಕಾರ್ಯಕರ್ತರು, ಸದಸ್ಯರು ಮತ್ತು ಸಿಐಟಿಯು ಬೆಂಬಲಿಗರ ಮೇಲೆ ತಮ್ಮ ಆಕ್ರಮಣವನ್ನು ತಡೆಯಿಲ್ಲದೆ ಮುಂದುವರಿಸುತ್ತಿದ್ದಾರೆ. ಈ ವರೆಗೆ ಸಿಪಿಐ (ಎಂ) ಮತ್ತು ಸಿಐಟಿಯುಗೆ ಸೇರಿದ ಮೂವತ್ತೊಂದು ಸಂಗಾತಿಗಳಿಗೆ ಪ್ರಾಣಾಂತಿಕವಾದ ಗಾಯಗಳಾಗಿವೆ. ಸಿಪಿಐ (ಎಂ) ಮತ್ತು ಸಿಐಟಿಯುಗೆ ಸೇರಿದ 67 ಮಂದಿ ಕಾರ್ಯಕರ್ತರ ಮನೆಗಳನ್ನು ಸುಟ್ಟು ಹಾಕಲಾಗಿದೆ ಮತ್ತು ಅವರ ಸ್ವತ್ತುಗಳನ್ನು ದೋಚಲಾಗಿದೆ. ಜಿ ಎನ್.ಎಲ್. ಎಫ್.ನ ಹಿಂಸಾಕಾಂಡ ಅಷ್ಟಕ್ಕೇ ನಿಲ್ಲದೆ ಮಾಜಿಸ್ಟ್ರೇಟರು, ಪೋಲಿಸ್ ಅಧಿಕಾರಿಗಳು ಮತ್ತು ಗಡಿ ಭದ್ರತಾದಳದವರೂ ಘೀಶಿಂಗ್ ಬೆಂಬಲಿಗರ ಧಾಳಿಗೆ ತುತ್ತಾಗಿದ್ದಾರೆ. ಪೋಲಿಸು ಠಾಣೆಗಳನ್ನು ಸುಟ್ಟು ಶಸ್ತ್ರಾಸ್ತ್ರಗಳನ್ನು ಕದ್ದೊಯ್ದಿದ್ದಾರೆ.

ಇಷ್ಟಲ್ಲದೆ ಕೇಂದ್ರ ಸರ್ಕಾರವು ಇನ್ನೆರಡು ತಿಂಗಳಲ್ಲಿ ಗೂರ್ಖಾಲ್ಯಾಂಡ್ ರಚನೆ ಮಾಡುವುದಾಗಿ ಆಶ್ವಾಸನೆಯಿತ್ತಿರುವುದೆಂದು ಜಿ.ಎನ್ ಎಲ್.ಎಫ್. ನವರು ಸುದ್ದಿ ಹರಡಿಸುತ್ತಿರುವುದರ ಕಡೆಗೂ ಗೃಹ ಮಂತ್ರಿಯವರ ಗಮನ ಸೆಳೆದ ಕಾ|| ಆನಂದ್ ಪಾಠಕ್ ಕೇಂದ್ರ ಸರ್ಕಾರ ಇಂತಹ ದೇಶದ್ರೋಹಿ ಚಟುವಟಿಕೆಗಳನ್ನು ಮಟ್ಟಹಾಕಬೇಕೆಂದೂ ವಿನಂತಿಸಿದ್ದಾರೆ. ಕೇಂದ್ರ ಸರ್ಕಾರವು ಪ. ಬಂಗಾಳ ಸರ್ಕಾರದೊಡನೆ ಸಮಾಲೋಚಿಸದೆ ಇಂತಹ ಯಾವ ಕ್ರಮ ಕೈಗೊಳ್ಳುವುದಿಲ್ಲವೆಂದೂ ಜಿ ಎನ್.ಎಲ್.ಎಫ್. ನ ಭಯೋತ್ಪಾದಕ ಕೃತ್ಯಗಳಿಗೆ ತಡೆಯೊಡ್ಡಲು ರಾಜ್ಯ ಸರ್ಕಾರಕ್ಕೆ ತನ್ನ ಮುಂದೆಯೂ ನೀಡುವುದೆಂದೂ ಗೃಹ ಮಂತ್ರಿಗಳು ಕಾ. ಪಾಠಕ್ ಅವರಿಗೆ ತಿಳಿಸಿದ್ದಾರೆ.

ಅಲ್ಲಲ್ಲಿ ಏನೇನು ?

ಬೆಂಗಳೂರು

ವಿಚಾರ ಗೋಷ್ಠಿ :- ರಾಷ್ಟ್ರೀಯ ಸಮಗ್ರತೆ ಮತ್ತು ದಿನಾಂಕ 22.3.87 3 PM. ಪ್ರಜಾಪ್ರಭುತ್ವ ಗೋಖಲೆ ಇನ್‌ಸ್ಟಿಟ್ಯೂಟ್, ಮಲ್ಲೇಶ್ವರಂ, 11ನೇ ಕ್ರಾಸ್, ಬೆಂಗಳೂರು.

ಎ.ಕೆ.ಜಿ. ಯವರ ಜೀವನದ ಕುರಿತು ಉಪನ್ಯಾಸ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಎ.ಕೆ.ಜಿ. ಸ್ಮಾರಕ ಗ್ರಂಥಾಲಯ ರಾಜಾಜಿನಗರ ಬೆಂಗಳೂರು.

ಮೈಸೂರು

ವಿಚಾರ ಗೋಷ್ಠಿ ಮಾನಸ ಗಂಗೋತ್ರಿಯ ಮಾನವಿಕಶಾಸ್ತ್ರ ಸಭಾಂಗಣದಲ್ಲಿ ದಿನಾಂಕ 22.3.87 ರಂದು "ರೈತ ಚಳುವಳಿಯ ದಿಕ್ಕು ದೆಸೆಗಳ ವಿಚಾರ ಸಂಕಿರಣ ಉದ್ಘಾಟನೆ ಡಾ|| ವಿ.ಕೆ. ನಟರಾಜ್, ಭಾಷಣಕಾರರು ಪಿ.ರಾಮಚಂದ್ರರಾವ್, ಜಿ.ವಿ. ಶ್ರೀರಾಮರೆಡ್ಡಿ.

ಜಿ.ಎನ್. ನಾಗರಾಜ್ ಮೈಸೂರಿನಲ್ಲಿ ದಿನಾಂಕ 21.3.87 ರಂದು ಜಿಲ್ಲೆ ಪಕ್ಷದ ಸರ್ವ ಸದಸ್ಯರ ಸಭೆ.

ಹಂಚಿನ ಕಾರ್ಮಿಕರ ಮುಷ್ಕರ

(1ನೇ ಪುಟದಿಂದ)

ವೆಚ್ಚ ಅತಿ ಹೆಚ್ಚನ್ನುವುದರಲ್ಲಿ ವಾದವಿಲ್ಲ. ಇದನ್ನು ಮಾಲಕರು ಗಮನಿಸಲು ಸಿದ್ಧರಿಲ್ಲದಿರುವುದರಿಂದ ಐ.ಎನ್.ಟಿ.ಯು.ಸಿ ಮತ್ತು ಎ ಐ ಟಿ ಯು.ಸಿ. ಕಾರ್ಮಿಕ ಸಂಘಗಳೊಂದಿಗೆ ಸಂಯುಕ್ತ ಹೋರಾಟ ಸಮಿತಿ ರಚಿಸಿ ಹೋರಾಟಕ್ಕೆ ಸಿದ್ಧರಾಗಬೇಕಾಯ್ತು.

ತಾ. 5.3.87 ರಿಂದ 16 ಜನಮಾಲೀಕರುಗಳ ಮನೆ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು. ಸತ್ಯಾಗ್ರಹ ನಡೆಸುತ್ತಿದ್ದ ಸಾವಿರಾರು ಕಾರ್ಮಿಕರನ್ನು ಪೋಲೀಸರು ಬಂಧಿಸಿ ನಗರದ ವಿವಿಧ ಠಾಣೆಗಳಲ್ಲಿ ತಾ. 6.3.87 ರವರೆಗೆ ಇರಿಸಿದರು. ನಂತರ 405 ಗಂಡಸರು ಮತ್ತು 56 ಮಹಿಳಾ ಕಾರ್ಮಿಕರನ್ನು ಕೋರ್ಟಿಗೆ ಹಾಜರು ಪಡಿಸಿ 15 ದಿನಗಳವರೆಗೆ ರಿಮಾಂಡು ಮಾಡಲಾಯ್ತು. ಪೋಲೀಸು ತಾ.5 ರಂದು ಮಧ್ಯರಾತ್ರಿ ಹಿಡಿದು ತಂದ ನಂತರ ಕುಡಿಯಲು ನೀರೂ ಕೂಡ ಇಲ್ಲದಂತ ಠಾಣೆಯಲ್ಲಿರಿಸಿದರು. ನೀರು ಕೇಳಿದಾಗ ಸರ್ಕಾರ ವ್ಯವಸ್ಥೆ ಮಾಡಲಿಲ್ಲವೆನ್ನುವ ಘರ್ಜನೆ ಕಾರ್ಮಿಕರ ಕಿವಿಗೆ ಕೇಳಿಸಿತು. ಮಂಗಳೂರಿನ ಕೆನರಾ ಟೈಲ್ ವರ್ಕ್ಸ್‌ನ ಎದುರಿನಲ್ಲಿ ತಾ. 5.3.87 ರಂದು ಪೋಲೀಸರು ನಡೆಸಿದ ಲಾಠಿ ಚಾರ್ಜಿನಲ್ಲಿ 6 ಮಂದಿ ಕಾರ್ಮಿಕರು ತೀವ್ರ ಗಾಯಗೊಂಡು ಸರ್ಕಾರಿ ಆಸ್ಪತ್ರೆಯ ಒಳರೋಗಿಯಾಗಿ ದಾಖಲಾಗಿದ್ದಾನೆ. ಹಲವಾರು ಕಾರ್ಮಿಕರು ಗಾಯಗೊಂಡಿದ್ದಾರೆ. ತಾ. 6.3.87 ರಂದು ಬೋಳೂರಿನ ಸಾವರಿನ್ ಟೈಲ ವರ್ಕ್ಸ್ ಎದುರಿಗೆ ಪೋಲೀಸರು ಲಾಠಿ ಚಾರ್ಜಿನಲ್ಲಿ ಹಲವಾರು ಕಾರ್ಮಿಕರಿಗೆ ಗಾಯಗಳಾದವು. ಸರ್ಕಾರ ಮಧ್ಯ ಪ್ರವೇಶ ಮಾಡಿ ಏರಿಳಿತ ತುಟ್ಟಿಭತ್ತೆ ಸಹಿತ ಮಜೂರಿ ಹೆಚ್ಚಳ ಮಾಡಲು ಮುಂದಾಗಬೇಕೆಂದೂ ಸರಕಾರವನ್ನು ಒತ್ತಾಯಿಸುತ್ತೇವೆ. ಮಾಲಿಕರು ತಮ್ಮ ಹಠಮಾರಿತನವನ್ನು ಬಿಟ್ಟು ಕೊಟ್ಟು ಕಾರ್ಮಿಕರ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸುವ ತನಕ ಹೋರಾಟ ಮುಂದುವರಿಸುವ ನಿರ್ಧಾರವನ್ನು ಐಕ್ಯ ಹೋರಾಟ ಸಮಿತಿ ಮಾಡಿದೆ. ಈ ಹೋರಾಟಕ್ಕೆ ಎಲ್ಲ ಕಾರ್ಮಿಕ ಸಂಘಗಳೂ, ಸಾರ್ವಜನಿಕರೂ ಬೆಂಬಲ ನೀಡಬೇಕೆಂದೂ, ಹಂಚಿನ ಕಾರ್ಮಿಕರ ಐಕ್ಯ ಹೋರಾಟ ಸಮಿತಿ ಪರವಾಗಿ ವಿನಂತಿ ಮಾಡಿಕೊಳ್ಳುತ್ತೇವೆ.

ಸಿ.ಐ.ಟಿ.ಯು. ಖಂಡನೆ

ಕಳೆದ ಜನವರಿ 28ರಿಂದ ಕುಂದಾಪುರದಲ್ಲಿ, ಮಾರ್ಚ್ 5ರಿಂದ ಮಂಗಳೂರು ಮತ್ತು ಉಡುಪಿಗಳಲ್ಲಿ ಹಂಚಿನ ಕಾರ್ಮಿಕರು ಮುಷ್ಕರ ಮಾಡುತ್ತಿದ್ದಾರೆ. ಮುಷ್ಕರ ಮಾಡುತ್ತಿದ್ದ ಹಂಚಿನ ಕಾರ್ಮಿಕರ ಮೇಲೆ ಮಂಗಳೂರಲ್ಲಿ ಕಳೆದ ವಾರ ಪೋಲೀಸರು ಬೆತ್ತ ಪ್ರಹಾರ ಮಾಡಿ 700ಕ್ಕೂ ಹೆಚ್ಚು ಕಾರ್ಮಿಕರನ್ನು ಬಂಧಿಸಿದ್ದಾರೆ.

ಪೋಲೀಸರು ಮಾಡಿದ ಈ ಅಪ್ರಚೋದಿತ ಬೆತ್ತ ಪ್ರಹಾರವನ್ನು ಸಿ.ಐ.ಟಿ.ಯು. ಖಂಡಿಸುತ್ತದೆ ಮತ್ತು ಬಂಧಿತರನ್ನು ಕೂಡಲೇ ಬೇಷರತ್ತಾಗಿ ಬಿಡುಗಡೆ ಮಾಡಬೇಕೆಂದು ಆಗ್ರಹಪಡಿಸುತ್ತದೆ. ಹಂಚಿನ ಕಾರ್ಮಿಕರಿಗೆ ಕನಿಷ್ಟ ಕೂಲಿ ಸಲಹಾ ಸಮಿತಿಯು ಶಿಫಾರಸಿಗೆ ಅನುಗುಣವಾಗಿ ಏರಿಳಿಯುವ ತುಟ್ಟಿ ಭತ್ತೆ ಸೇರಿದಂತೆ ಕನಿಷ್ಟ ಕೂಲಿಯನ್ನು ಪ್ರಕಟಿಸಬೇಕೆಂದೂ, ಪ್ರಸ್ತುತ ಕೈಗಾರಿಕಾ ವಿವಾದದಲ್ಲಿ ಕಾರ್ಮಿಕ ಆಯುಕ್ತರು ಕೂಡಲೇ ಮಧ್ಯೆ ಪ್ರವೇಶಿಸಿ ಬಗೆಹರಿಸಬೇಕೆಂದೂ ಸಿ.ಐ.ಟಿ.ಯು. ಕರ್ನಾಟಕ ಸರ್ಕಾರವನ್ನು ಒತ್ತಾಯಪಡಿಸುತ್ತದೆ. ಎಂದು ಸಿ.ಐ.ಟಿ.ಯು. ರಾಜ್ಯ ಸಮಿತಿ ಕಾರ್ಯದರ್ಶಿ ಸಿ. ನಂಜುಂಡಪ್ಪ ತಿಳಿಸುತ್ತಾರೆ.

(1ನೇ ಪುಟದಿಂದ)

ಸಮಾಜವಾದವೆಂದರೇನು ?

ಯನ್ನು ವಿವರಿಸಲು ನಾವು ಮಾಸ್ಕೋ ಅಥವಾ ಪೇಕಿಂಗ್ ಕಡೆ ನೋಡುವ ಅಗತ್ಯವಿಲ್ಲ.

ಸುಕುಮೋಲ್ ಸೇನ್ :- ಸಮಾಜವಾದವೆಂದರೇನು? ವಿವರಿಸಿ.

ರಾಜೀವ್ ಗಾಂಧಿ :- ದುರಾದೃಷ್ಟ ಸಂಗತಿ ಏನೆಂದರೆ ನಮ್ಮಲ್ಲಿಯ ಕೆಲವರು ನಮ್ಮದೇಶದೊಳಗಿನ ಪ್ರತಿಭಟನೆಯನ್ನು ನೋಡಲು ಇಚ್ಛೆಪಡುತ್ತಿಲ್ಲ. ಅವರು ಹೊರಗೆ ನೋಡಲು ಇಚ್ಛಿಸುತ್ತಾರೆ ಮತ್ತು ಬೇರೆಯವರು ಮಾಡಿದ್ದನ್ನು ಅನುಸರಿಸುತ್ತಾರೆ.

ಸಮರ ಮುಖರ್ಜಿ :- ಪಂಡಿತ ನೆಹರೂರವರು ಸಮಾಜವಾದದ ಕುರಿತು ಮಾತನಾಡಿದಾಗ ಅವರು ಸೋವಿಯತ್ ಯೂನಿಯನ್‌ನತ್ತ ನೋಡಿದ್ದರು. ಆಗ ಸಮಾಜವಾದದ ವಿಚಾರ ಅವರ ತಲೆಯಲ್ಲಿ ಬಂತು. ಇದಕ್ಕಿಂತ ಮುಂಚೆ ಅವರಲ್ಲಿ ಸಮಾಜವಾದದ ವಿಚಾರವಿದ್ದಿಲ್ಲ.

ಸುಕುಮೋಲ್ ಸೇನ್ :- ಪ್ರಧಾನ ಮಂತ್ರಿಯವರು ನೆಹರೂರವರ ಆತ್ಮ ಚರಿತ್ರೆಯನ್ನು ಓದಿದರೆ ಒಳ್ಳೆಯದು.

ದಕ್ಷಿಣ ಆಫ್ರಿಕಾದ ಹೋರಾಟದಲ್ಲಿ ಕಮ್ಯುನಿಸ್ಟರು

(7ನೇ ಪುಟದಿಂದ)

'30ರ ಹಾಗೂ 40' ರ ದಶಕದಲ್ಲಿ ಪಕ್ಷದ ಸಮರಶೀಲ ಹಾಗೂ ನಿರ್ಭಯ ಹೋರಾಟದಿಂದಾಗಿ ಒಂದೆಡೆ ಎ.ಎನ್.ಸಿ.ಯ ತೀವ್ರಗಾಮಿಗಳು ಕಮ್ಯುನಿಸ್ಟರೊಂದಿಗೆ ಹೆಚ್ಚೆಚ್ಚು ಸಹಕಾರ ಬಯಸಿದರೆ ಇನ್ನೊಂದೆಡೆ 1950 ರಲ್ಲಿ ನವನಾಝೀ ನ್ಯಾಶನಲಿಸ್ಟ್ ಪಕ್ಷದ ಬಿಳಿಯ ಸರ್ಕಾರ "ಕಮ್ಯುನಿಸಂ ದಮನ ಶಾಸನ"ವನ್ನು ಜ್ಯಾರಿ ಮಾಡಿತ್ತು. ಇದರಿಂದಾಗಿ ಸುಮಾರು ಒಂದು ದಶಕದ ಕಾಲ ಪಕ್ಷದ ಸಂಘಟಿತ ಕೆಲಸಕ್ಕೆ ವಿಪರೀತ ತೊಂದರೆಯಾದರೂ ವೈಯಕ್ತಿಕವಾಗಿ ಕಮ್ಯುನಿಸ್ಟರ ಧೀರ ಹೋರಾಟಗಳಿಂದಾಗಿ '50ರ ದಶಕ' "ಹೋರಾಟಮಯ ದಶಕ" ಎಂದು ದಕ್ಷಿಣ ಆಫ್ರಿಕಾದ ಇತಿಹಾಸದಲ್ಲಿ ದಾಖಲಾಗಿದೆ. ಅನ್ಯಾಯದ ಶಾಸನಗಳ ಉಲ್ಲಂಘನೆ, ಜನತಾ ಸಮ್ಮೇಳನ ಹಾಗೂ ಸ್ವಾತಂತ್ರ್ಯ ಸನ್ನದು, ಸೆ ಖುಖು ನಿಲ್ಯಾಂಡ್‌ನ ರೈತ ಬಂಡಾಯ, ಕಾರ್ಮಿಕ ಸಂಘಗಳ "ದಿನಕ್ಕೊಂದು ಪೌಂಡು" ಆಂದೋಲನ, ಸಾಮೂಹಿಕ ಬಸ್ ಬಹಿಷ್ಕಾರ, ಪಾಸ್ ಕಾನೂನುಗಳ ವಿರುದ್ಧ ಭಾರೀ ಮತಪ್ರದರ್ಶನ ಆ ದಶಕದ ಕೆಲವು ಪ್ರಮುಖ ಹೋರಾಟಗಳು.

ಈ ಹೋರಾಟಗಳ ಅನುಭವದ ಹಿನ್ನೆಲೆಯಲ್ಲಿ 1962ರಲ್ಲಿ 'ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷ'[S.A.C.P.] ಎಂಬ ಹೆಸರಲ್ಲಿ ಮರು ಸಂಘಟನೆಗೊಂಡು ಪಕ್ಷ ಮತ್ತೆ ಸಂಘಟಿತವಾಗಿ ಕೆಲಸಮಾಡಲು ಶುರುಮಾಡಿತು. ಆದೇವರ್ಷ ಗುಪ್ತವಾಗಿ ನಡೆದ ಐದನೇ ರಾಷ್ಟ್ರೀಯ ಸಮ್ಮೇಳನದಲ್ಲಿ ಅಂಗೀಕರಿಸಿದ "ದಕ್ಷಿಣ ಆಫ್ರಿಕಾದ ಸ್ವಾತಂತ್ರ್ಯದ ದಾರಿ" ಎಂಬ ಕಾರ್ಯಕ್ರಮ ಪಕ್ಷದ ಹಾಗೂ ವಿಮೋಚನಾ ಹೋರಾಟಗಾರರ ದಾರಿ ದೀಪಿಕೆಯಾಗಿದೆ. ಈ ಕಾರ್ಯಕ್ರಮ ದಕ್ಷಿಣ ಆಫ್ರಿಕಾದ "ವಿಶಿಷ್ಟ ರೀತಿಯ ವಸಾಹತುಶಾಹಿ" ಯ ವರ್ಗದ ವಿಶ್ಲೇಷಣೆ ನೀಡಿ ಪಕ್ಷದ ಸದ್ಯದ ತುರ್ತಿನ ಕರ್ತವ್ಯವೆಂದರೆ ರಾಷ್ಟ್ರೀಯ ವಿಮೋಚನೆಗಾಗಿ ಸಂಯುಕ್ತರಂಗ ರಚಿಸಲು, ಬಿಳಿಯರ ಪ್ರಾಬಲ್ಯವನ್ನು ನಾಶಗೊಳಿಸುವ ರಾಷ್ಟ್ರೀಯ ಪ್ರಜಾಪ್ರಭುತ್ವಕ್ರಾಂತಿಗಾಗಿ ದುಡಿಯುವುದು ಎಂದು ಘೋಷಿಸಿದೆ.

1970ರಲ್ಲಿ ಆಫ್ರಿಕಾದ ಜನತೆಗೆ ಅದು ನೀಡಿದ ಕರೆ ಕೆಲವು ಅಂಶಗಳು ಹೀಗಿವೆ–

"ಉಮ್‌ಕೊಂಟೋ ವಿ ಸಿಜ್ವೆಯ ಸಶಸ್ತ್ರ ಗುಂಪುಗಳು ಹೋರಾಟಕ್ಕೆ ಸಿದ್ಧವಾಗಿವೆ. ಆದರೆ ಅವು ಏಕಾಂಗಿಯಾಗಿ ಹೋರಾಡಲಾರವು. ಜನತೆಯೂ ಕಾರ್ಯೋನ್ಮುಖರಾಗಬೇಕು. ಅವರು ತಮ್ಮ ಕಾನೂನು ಬಾಹಿರ ಸಂಘಗಳನ್ನು, ಎ.ಎನ್.ಸಿ. ಯನ್ನು ಕಾರ್ಮಿಕ ಸಂಘಗಳನ್ನು, ಕಮ್ಯುನಿಸ್ಟ ಪಕ್ಷವನ್ನು ಕಟ್ಟಬೇಕು. ಹೆಚ್ಚಿನ ವೇತನ, ಭೂಮಿ ಹಾಗೂ ಸ್ವಾತಂತ್ರ್ಯಕ್ಕಾಗಿ ಸಮರಶೀಲ ಹೋರಾಟ ನಡೆಸಬೇಕು. ಪ್ರತಿರೋಧದ ಭಾವನೆ ಬಿಡದೆ ಬೆಳೆಸಬೇಕು."

ಪಕ್ಷದ ಕಾರ್ಯಕ್ರಮದ ಬೆಳ್ಳಿಹಬ್ಬದ ವರ್ಷದಲ್ಲಿ ದಕ್ಷಿಣ ಆಫ್ರಿಕಾದ ಧೀರ ಜನತೆ ದ್ವಿಗುಣ ಹುಮ್ಮಸ್ಸಿನಂತೆ ಅದನ್ನೇ ಮಾಡುತ್ತಿದ್ದಾರೆ. ●

ಅಪಾರ್ಥೀಡ್ ವಿರುದ್ಧ ಪತ್ರಿಕಾ ಗೋಷ್ಠಿ

ಭಾರತದ ಜನತೆಗೂ ದಕ್ಷಿಣ ಆಫ್ರಿಕಾದ ಜನತೆಯ ಹೋರಾಟಕ್ಕೂ ವಿಶೇಷವಾದ ಸಂಬಂಧ ಹಾಗೂ ಹೆಚ್ಚಿನ ಸಾಮೀಪ್ಯವಿದೆ.

21 ಮಾರ್ಚ್ 1987 ರಂದು ವರ್ಣದ್ವೇಷಿ ವಿರೋಧಿ ದಿನವನ್ನಾಗಿ ಆಚರಿಸುವಂತೆ ವಿಶ್ವ ರಾಷ್ಟ್ರಸಂಸ್ಥೆ ಕರೆ ಕೊಟ್ಟಿದೆ. ನಮ್ಮ ದೇಶದಲ್ಲೂ ರಾಷ್ಟ್ರ ಮಟ್ಟದಲ್ಲಿ ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳು ಈ ಕರೆಯನ್ನು ಅನುಮೋದಿಸಿದೆ.

ಭಾರತದ ಜನ, ಅದರಲ್ಲಿಯೂ ವಿಶೇಷವಾಗಿ ದುಡಿಯುವ ಜನ, ಎ ಎನ್. ಸಿ. ಮತ್ತಿತರ ವಿಮೋಚನೆಗಾಗಿ ಹೋರಾಡುತ್ತಿರುವ ಶಕ್ತಿಗಳಿಗೆ ತಮ್ಮ ಸಂಪೂರ್ಣ ಬೆಂಬಲ ವ್ಯಕ್ತಪಡಿಸುತ್ತೇವೆ. ದಕ್ಷಿಣ ಆಫ್ರಿಕಾದ ಜನತೆ ತಮ್ಮ ಹೋರಾಟದಲ್ಲಿ ಜಯಭೇರಿ ಹೊಡೆಯುತ್ತಾರೆಂಬುದರಲ್ಲಿ ನಮಗೆ ಅಚಲ ವಿಶ್ವಾಸವಿದೆ. ಕರ್ನಾಟಕದ ಕಾರ್ಮಿಕ ವರ್ಗ ಪ್ರಜ್ಞಾಪೂರ್ವಕವಾಗಿ ಈ ಧರ್ಮಯುದ್ಧಕ್ಕೆ ಬೆಂಬಲಿಸಬೇಕೆಂದು ನಾವು ಮನವಿ ಮಾಡುತ್ತೇವೆ. ರಾಜ್ಯಾದ್ಯಂತ ಸಭೆಗಳನ್ನು ನಡೆಸಿ 21-3-87 ರಂದು ವರ್ಣದ್ವೇಷ ವಿರುದ್ಧ ದಿನಾಚರಣೆ ನಡೆಸಬೇಕೆಂದು ನಾವು ಕರೆ ಕೊಡುತ್ತೇವೆ. ದಕ್ಷಿಣ ಆಫ್ರಿಕಾದ ವಿಮೋಚನಾ ಸಮರಕ್ಕೆ ಉದಾರ ಧನ ಸಹಾಯ ಮಾಡಬೇಕೆಂದು ನಾವು ದುಡಿಯುವ ಜನರಿಗೆ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇವೆ. ಎಂದು ಸಿ.ಐ.ಟಿ.ಯು ಏಟಕ್, ಇಂಟಕ್, ಹಾಗುಬಿಎಂಎಸ್ ಮುಖಂಡರು ತಿಳಿಸಿದ್ದಾರೆ.

ಈ ವಾರ....

ಇನ್ನು ನೆಪಗಳನ್ನು ಮುಂದೊಡ್ಡಲು ಸಾಧ್ಯವಾಗದಂಥ ಇಕ್ಕಳದಲ್ಲಿ ಅಮೆರಿಕಾದ ರಾಷ್ಟ್ರಪತಿ ಸಿಕ್ಕಿಕೊಂಡರು. ಸ್ವಾಗತಿಸುವುದೊಂದೇ ಅವರ ಮುಂದಿದ್ದ ಮಾರ್ಗ. ಬೇರೆ ಯಾವುದೇ ಮಾರ್ಗ ಹಿಡಿದಿದ್ದರೂ ಅವರು ಏಕಾಂಗಿಯಾಗುತ್ತಿದ್ದರಷ್ಟೇ ಅಲ್ಲ, ಜಾಗೃತ ಜಗತ್ತಿನ ಮೂದಲಿಕೆಗೆ ಈಡಾಗುತ್ತಿದ್ದರು.

ಇತ್ತೀಚಿನ ಸೋವಿಯೆತ್ ಶಾಂತಿ ಪ್ರಸ್ತಾಪದ ಬಗ್ಗೆ 'ಪ್ರಜಾವಾಣಿ' ಯಲ್ಲಿ ಮಾರ್ಚ್ 8.

ಮಂಗಳೂರು ತೈಲಾಗಾರ ಘಟಕದ ಸ್ಥಾಪನೆ ಒತ್ತಾಯದ ಮೇಲೆ ತಣ್ಣೀರೆರಚಿ ರಾಜಕೀಯ ಹಿತಾಸಕ್ತಿಯಿಂದ ಮಾತ್ರ ಕರ್ನಾಲ್ ಘಟಕದಲ್ಲಿ ಉತ್ಸಾಹ ತೋರಿಸುತ್ತಿರುವುದು ಕರ್ನಾಟಕದ ಜನತೆಯ ದೃಷ್ಟಿಯಲ್ಲಿ ಪ್ರಶ್ನಾರ್ಹವಾಗಿ ಕಾಣುತ್ತದೆ.

'ಪ್ರಜಾವಾಣಿ', ಮಾ, 9.

ರಿಸರ್ವ್ ಬ್ಯಾಂಕ್ ನಿನ್ನೆ ಮಾಡಿದ 0. 25% ಅಪಮೌಲ್ಯದೊಂದಿಗೆ ರೂಪಾಯಿ ಬೆಲೆ ಹಿಂದೆಂದೂ ಕಂಡು ಬರದಷ್ಟು ಕೆಳಮಟ್ಟಗೆ ಇಳಿಯಿತು. ಈ ವರ್ಷದ ಆರಂಭದಿಂದ ರಿಸರ್ವ್ ಬ್ಯಾಂಕ್ ಇದುವರೆಗೆ 22 ಬಾರಿ ರೂಪಾಯಿಯ ಅಪಮೌಲ್ಯ ಮಾಡಿದ್ದು ರೂಪಾಯಿಯ ಬೆಲೆ 6.4%ದಷ್ಟು ಇಳಿದಿದೆ.

ಯು. ಎನ್. ಐ. ಸುದ್ದಿ, ಮಾ. 10

ಇಪ್ಪತ್ತು ದೊಡ್ಡ ಕೈಗಾರಿಕಾ ಕುಟುಂಬಗಳು ಹಣಕಾಸು ಸಂಸ್ಥೆಗಳಿಗೆ ಕೊಡಬೇಕಾಗಿರುವ ಬಾಕಿ ತೀವ್ರವಾಗಿ ಏರುತ್ತಿದೆ. 1985ರ ಒಟ್ಟು ಬಾಕಿ 13.94 ಕೋಟಿ ರೂ. ಗಳು ಮಾರ್ಚ್ 1986ರ ಹೊತ್ತಿಗೆ 23 24 ಕೋಟಿ ರೂ. ಗಳಿಗೇರಿದೆ. ಬಿರ್ಲಾ ಗುಂಪಿನದ್ದು ಅತಿ ಹೆಚ್ಚು 8.23 ಕೋಟಿ ರೂ. ಗಳು. ಟಾಟಾಗಳದ್ದು 1.13 ಕೋಟಿ ರೂ. ಗಳು.

ಯು. ಎನ್. ಐ. ಸುದ್ದಿ. ಮಾ. 8.

ಅತ್ಯಂತ ಪ್ರಬಲವಾಗಿ ಕೂತು ಹತ್ತು ವರ್ಷಗಳಿಂದ ಪಟ್ಟಾಗಿ ಅಧಿಕಾರದಲ್ಲಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನೆದುರಿಸಲು.... ರಾಜೀವರ ಕಾಂಗ್ರೆಸ್ ಪಕ್ಷ ಏದುಉಸಿರು ಬಿಡುತ್ತಿದೆ.

'ಲಂಕೇಶ್ ಪತ್ರಿಕೆ'ಯಲ್ಲಿ, ಮಾ. 15

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053 Editorial and Managerial Office : L-56, K. V. Temple Street,
Sultanpet B-53 Phone : 75331 Editor P. Ramachandra Rao Managing Editor : N.K. Upadhyaya